ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಒಟ್ಟು ಪ್ರಶ್ನೆಗಳು – ೫೯**

**ಪಟ್ಟಿ – ೦೭**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೈದನೇ ಅಧಿವೇಶನ

**ಮಂಗಳವಾರ, ದಿನಾಂಕ : ೧ನೇ ಜುಲೈ, ೨೦೧೪**

---

## ಸಮೂಹ – II

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

---

## ವಿಮಾನ ನಿಲ್ದಾಣದ ಉನ್ನತ್ತೀಕರಣ

**ಡಾ|| ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೩೦೦ (೪೦೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕರ್ನಾಟಕದ ಅತ್ಯಂತ ಪ್ರಮುಖ ವಾಣಿಜ್ಯ ನಗರಿಯಾದ ಹುಬ್ಬಳ್ಳಿಯಲ್ಲಿನ ವಿಮಾನ ನಿಲ್ದಾಣವನ್ನು ಉನ್ನತ್ತೀಕರಿಸಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಆ) ಈ ವಿಮಾನ ನಿಲ್ದಾಣದ ರಸ್ತೆಯನ್ನು ಅಗಲಗೊಳಿಸಿ, ಆಧುನಿಕ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುವುದೆ ;

(ಇ) ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿನ ಸಂಚಾರ ದಟ್ಟಣೆ ಸುಗಮಗೊಳಿಸಲು ಟ್ರಾಫಿಕ್ ಐಲ್ಯಾಂಡ್ ಮುಂತಾದ ಸ್ಥಳಗಳಲ್ಲಿ ಮೇಲು ಸೇತುವೆಗಳನ್ನು ನಿರ್ಮಿಸಲು ಯೋಜನೆಗಳನ್ನು ಸರ್ಕಾರವು ಯಾವಾಗ ಕೈಗೆತ್ತಿಕೊಳ್ಳುವುದು ?

## ಸೋಲಾರ್ ಶಕ್ತಿಯ ಪೂರ್ಣ ಪ್ರಮಾಣದ ಬಳಕೆ

**ಡಾ|| ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೩೦೧ (೪೦೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿನ ಇಂಧನದ ಕೊರತೆಯನ್ನು ನಿಭಾಯಿಸಲು ಸರ್ಕಾರವು ಅಸಂಪ್ರದಾಯಿಕ ಇಂಧನವನ್ನು ಪಡೆಯಲು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಆ) ಸೋಲಾರ್ ಶಕ್ತಿಯ ಪೂರ್ಣ ಪ್ರಮಾಣದ ಬಳಕೆ ಮಾಡಿಕೊಳ್ಳಲು ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳಾವುವು ;

(ಇ) ಸಂಪೂರ್ಣ ಸೋಲಾರ್ ಗ್ರಾಮ ಸ್ಥಾಪಿಸಲಾಗುವುದೆ ;

(ಈ) ನಗರ ಉದ್ಯಾನವನಗಳಲ್ಲಿ ಸೋಲಾರ್ ದೀಪಗಳನ್ನು ಅಳವಡಿಸಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ?

## ಸಂಸ್ಕರಣಾ ಘಟಕಗಳು ಮತ್ತು ಶೈತ್ಯಾಗಾರಗಳ ಸ್ಥಾಪನೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೩೦೨ (೪೦೪) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಂಸ್ಕರಣಾ ಘಟಕಗಳು ಮತ್ತು ಶೈತ್ಯಾಗಾರಗಳ ಕೊರತೆಯಿಂದ ಸಾಕಷ್ಟು ತೋಟಗಾರಿಕಾ ಉತ್ಪನ್ನಗಳು ಕೊಳೆತು ಹೋಗಿ ರೈತರು ಸಂಕಷ್ಟಕ್ಕೆ ಗುರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ಅದರಲ್ಲಿಯೂ ಉತ್ತರ ಕರ್ನಾಟಕದಲ್ಲಿ ಸಂಸ್ಕರಣಾ ಘಟಕಗಳನ್ನು ಮತ್ತು ಶೈತ್ಯಾಗಾರಗಳನ್ನು ಸ್ಥಾಪಿಸಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಇ) ಧಾರವಾಡ ಜಿಲ್ಲೆಯಲ್ಲಿ ಉತ್ತಮವಾದ ಅಲ್ಫಾನ್ಸೋ ಮಾವಿನ ತಳಿಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ ?

## ಬೆಳಗಾವಿ ಸುವರ್ಣಸೌಧದ ಹಿಂಭಾಗದಲ್ಲಿ ಶಾಸಕರ ಭವನ ನಿರ್ಮಾಣ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೩೦೩ (೪೦೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕರ್ನಾಟಕ ಹೆಬ್ಬಾಗಿಲು ಎಂದು ಖ್ಯಾತಿ ಪಡೆದ ಬೆಳಗಾವಿ ನಗರದಲ್ಲಿನ ಸಂಚಾರ ದಟ್ಟಣೆ ಸುಗಮಗೊಳಿಸಲು ಅಲ್ಲಿನ ರಸ್ತೆಗಳನ್ನು ಯಾವಾಗ ಅಭಿವೃದ್ಧಿಪಡಿಸಲಾಗುವುದು ;

(ಆ) ಬೆಳಗಾವಿ ನಗರ, ಸಾಂಬ್ರಾ ವಿಮಾನ ನಿಲ್ದಾಣ ಮತ್ತು ಸುವರ್ಣಸೌಧಕ್ಕೆ ಸಂಪರ್ಕ ಹೊಂದುವಂತೆ ಹೊಸತಾದ ರಸ್ತೆ ಸಂಪರ್ಕ ಮತ್ತು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಳ್ಳುತ್ತದೆ ;

(ಇ) ಅಲ್ಲಿನ ಸುವರ್ಣಸೌಧದ ಹಿಂಭಾಗದಲ್ಲಿ ಶಾಸಕರ ಭವನ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ, ಖಾಯಂ ಕಛೇರಿಗಳನ್ನು ಸ್ಥಾಪಿಸಿ ನಿಯತಕಾಲಿಕವಾಗಿ ಸಚಿವ ಸಂಪುಟದ ಸಭೆಗಳನ್ನು ಮತ್ತು ಉಭಯ ಸದನಗಳ ಜಂಟಿ ಅಧಿವೇಶನಗಳನ್ನು ಏರ್ಪಡಿಸಲು ಸರ್ಕಾರವು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದೇ; ಹಾಗಿದ್ದಲ್ಲಿ, ಯಾವಾಗ ?

## ಕೃಷಿ ಯಂತ್ರೋಪಕರಣಗಳ ವಿತರಣೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೦೪ (೪೧೦) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಿಂದ ಕೃಷಿ ಯಾಂತ್ರೀಕರಣ ಯೋಜನೆಯನ್ವಯ ವಿತರಿಸಲಾದ ಯಂತ್ರೋಪಕರಣಗಳು ಎಷ್ಟು; ಮೆತ್ತು ಯಾವುವು; (ಪವರ್ ಟಿಲ್ಲರ್, ಟ್ರ್ಯಾಕ್ಟರ್, ಭತ್ತದ ನೇಜಿಯಂತ್ರ, ಕಟಾವು ಯಂತ್ರ, ಕೂರುವ ಯಂತ್ರ ಇತ್ಯಾದಿ ವಿವರಗಳೊಂದಿಗೆ ನೀಡುವುದು) ;

(ಆ) ಈ ಯಂತ್ರೋಪಕರಣಗಳಿಗೆ ನೀಡಲಾದ ಸಹಾಯಧನವೆಷ್ಟು ;

(ಇ) ಸದರಿ ವರ್ಷದಲ್ಲಿ ರಾಜ್ಯದಲ್ಲಿ ಕೃಷಿ ಚಟುವಟಿಕೆಗಳು ಪ್ರಾರಂಭವಾಗಿ ಸುಮಾರು ಒಂದು ತಿಂಗಳಾದರೂ ಪವರ್ ಟಿಲ್ಲರ್ ಸಹಾಯಧನದಲ್ಲಿ ರೈತರಿಗೆ ವಿತರಿಸದೆ ಇರಲು ಕಾರಣವೇನು ; ಈ ವಿಳಂಬಕ್ಕೆ ಯಾವ ಅಧಿಕಾರಿಗಳನ್ನು ಹೊಣೆ ಮಾಡಲಾಗುವುದು ?

## ಸಕ್ಕರೆ ಕಾರ್ಖಾನೆಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೦೫ (೪೧೨) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಖಾಸಗಿ ಸಹಕಾರಿ ಮತ್ತು ಸರ್ಕಾರಿ ಸಕ್ಕರೆ ಕಾರ್ಖಾನೆಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಆ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು ಉತ್ಪಾದನೆಯಾದ ಸಕ್ಕರೆಯ ಪ್ರಮಾಣವೆಷ್ಟು (ಜಿಲ್ಲಾವಾರು ಖಾಸಗಿ, ಸರ್ಕಾರಿ, ಸಹಕಾರಿ ಸಕ್ಕರೆ ಕಾರ್ಖಾನೆವಾರು ವಿವರ ನೀಡುವುದು) ;

(ಇ) ಕಳೆದ ಮೂರು ವರ್ಷಗಳಲ್ಲಿ ಕಬ್ಬು ಬೆಳೆದ ಭೂಮಿಯ ಒಟ್ಟು ವಿಸ್ತೀರ್ಣವೆಷ್ಟು (ಜಿಲ್ಲಾವಾರು ವಿವರ ನೀಡುವುದು) ?

## ತೆಂಗು ಸಂಸ್ಕರಣಾ ಘಟಕಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೦೬ (೪೦೯) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಇರುವ ತೆಂಗು ಸಂಸ್ಕರಣಾ ಘಟಕಗಳು ಎಷ್ಟು; ಅವು ಯಾವುವು (ಜಿಲ್ಲಾವಾರು ವಿವರ ನೀಡುವುದು) ;

(ಆ) ಈ ತೆಂಗು ಸಂಸ್ಕರಣಾ ಘಟಕಗಳಲ್ಲಿರುವ ಖಾಸಗಿ ಹಾಗೂ ಸರ್ಕಾರಿ ಘಟಕಗಳು ಎಷ್ಟು ; ಅವು ಯಾವುವು ; (ಜಿಲ್ಲಾವಾರು, ಖಾಸಗಿ ಮತ್ತು ಸರ್ಕಾರಿ ಘಟಕವಾರು ಪ್ರತ್ಯೇಕ ವಿವರ ನೀಡುವುದು) ;

(ಇ) ರಾಜ್ಯದಲ್ಲಿ ತೆಂಗಿನಕಾಯಿಯನ್ನು ರೂಪಾಂತರಿಸಿ ಯಾವ ಯಾವ ಆಹಾರ ಮತ್ತು ಆಹಾರೇತರ ಬಳಕೆಗೆ ಬಳಸಲಾಗುತ್ತಿದೆ ;

(ಈ) ರಾಜ್ಯದ ಕರಾವಳಿಯಲ್ಲಿ ತೆಂಗು ಸಂಸ್ಕರಣಾ ಘಟಕವನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ ; ಇಲ್ಲವಾದಲ್ಲಿ ಕಾರಣವೇನು ?

## ರೈತರಿಗೆ ಪಾವತಿಸಬೇಕಾದ ಕಬ್ಬಿನ ಬಾಕಿ ಬಾಬ್ತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೦೭ (೪೦೮) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯು ಎಷ್ಟು ರೈತರಿಗೆ ಬಾಕಿಯಿರುವ ಕಬ್ಬಿನ ಹಣವನ್ನು ಪಾವತಿಸಿದೆ ; ಮತ್ತು ಎಷ್ಟು ರೈತರಿಗೆ ಕಬ್ಬಿನ ಹಣವನ್ನು ಪಾವತಿಸಲು ಬಾಕಿಯಿದೆ ; (ಪಾವತಿಸಲು ಬಾಕಿಯಿರುವ ರೈತರ ಹೆಸರು, ವಿಳಾಸ ಮತ್ತು ಮೊತ್ತದೊಂದಿಗೆ ವಿವರ ನೀಡುವುದು) ;

(ಆ) ಸದರಿ ಕಾರ್ಖಾನೆಯು ಎಷ್ಟು ಕಾರ್ಮಿಕರಿಗೆ ಬಾಕಿಯಿರುವ ವೇತನವನ್ನು ಪಾವತಿಸಿದೆ ; ಎಷ್ಟು ಕಾರ್ಮಿಕರಿಗೆ ವೇತನ ಪಾವತಿಸಲು ಬಾಕಿಯಿದೆ ;

(ಇ) ಕಾರ್ಖಾನೆಯು ಎಷ್ಟು ಸಹಕಾರಿ ಸಂಘಗಳಿಗೆ ಪಡೆದ ಸಾಲವನ್ನು ಮರುಪಾವತಿಸಿದೆ ; ಇನ್ನು ಎಷ್ಟು ಸಹಕಾರಿ ಸಂಘಗಳಿಗೆ ಸಾಲ ಮರುಪಾವತಿಸಲು ಬಾಕಿಯಿದೆ (ಸಾಲ ಮರುಪಾವತಿಸಿದ ಮತ್ತು ಮರುಪಾವತಿಸಲು ಬಾಕಿಯಿರುವ ಸಹಕಾರಿ ಸಂಘವಾರು ವಿವರ ನೀಡುವುದು) ;

(ಈ) ಕಾರ್ಖಾನೆಯು ಕಾರ್ಮಿಕರಿಗೆ ಪಾವತಿಸಲು ಬಾಕಿಯಿರುವ ವೇತನಕ್ಕೆ ಬಡ್ಡಿ ನೀಡಿ, ರೈತರಿಗೆ ಪಾವತಿಸಲು ಬಾಕಿಯಿರುವ ಮೊತ್ತಕ್ಕೆ ಬಡ್ಡಿ ನೀಡದೇ ಇರಲು ಕಾರಣವೇನು ?

## ವಿದ್ಯುತ್ ಸೌಲಭ್ಯ ವಂಚಿತ ಕುಟುಂಬಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೦೮ (೪೧೧) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಿದ್ಯುತ್ ಸೌಲಭ್ಯ ವಂಚಿತ ಕುಟುಂಬಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು, ಗ್ರಾಮವಾರು ವಿವರ ನೀಡುವುದು) ;

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ವಿದ್ಯುತ್ ಸೌಲಭ್ಯ ವಂಚಿತ ಕುಟುಂಬಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಆಶಾಕಿರಣ, ಪ್ರಿಯದರ್ಶಿನಿ, ಕಾಯಕನಿಧಿ ಯೋಜನೆಗಳು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೩೨೯ (೪೧೪) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಹಕಾರ ಇಲಾಖೆಯಿಂದ ಮೂರು ಹೊಸ ಯೋಜನೆಗಳಾದ ಅಂಗವಿಕಲರಿಗೆ ಆಶಾಕಿರಣ, ಮಹಿಳೆಯರಿಗೆ ಪ್ರಿಯದರ್ಶಿನಿ, ಹಮಾಲರಿಗೆ ಕಾಯಕ ನಿಧಿ ಯೋಜನೆಗಳನ್ನು ಜಾರಿಗೆ ತರಲಾಗುವುದೇ ;

(ಆ) ಈ ಯೋಜನೆಗಳಿಂದ ಯಾವ-ಯಾವ ಅನುಕೂಲತೆಗಳು ಆಗುವುವು (ವಿವರ ಒದಗಿಸುವುದು) ;

(ಇ) ಈ ಯೋಜನೆಗೆ ಬಜೆಟ್ಟಿನಲ್ಲಿ ಹಣ ಒದಗಿಸಲಾಗಿದೆಯೇ (ವಿವರ ನೀಡುವುದು) ;

(ಈ) ಈ ಯೋಜನೆ ಜಾರಿಯು ಈಗ ಯಾವ ಹಂತದಲ್ಲಿದೆ ?

## ಕೃಷಿ ವಿಶ್ವವಿದ್ಯಾಲಯದಲ್ಲಿ ಬಿತ್ತನೆ ಬೀಜ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೩೧೦ (೪೧೬) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಯಾವ-ಯಾವ ಬಿತ್ತನೆ ಬೀಜಗಳನ್ನು ಬೆಳೆಯಲಾಗುತ್ತದೆ ; ಹಾಗೂ ಅದರ ಶಾಖಾ ಕೃಷಿ ಕೇಂದ್ರಗಳಲ್ಲಿ ಯಾವ-ಯಾವ ಬೀಜಗಳನ್ನು ಬೆಳೆಯುತ್ತಿರುವರು (ಪ್ರತಿಯೊಂದು ಸೀಡ್ಸ್ ಫಾರ್ಮದ ಬಗ್ಗೆ ವಿವರ ಒದಗಿಸುವುದು) ;

(ಆ) ವಿಶ್ವವಿದ್ಯಾಲಯದವರು ಹಾಗೂ ಶಾಖಾ ಕೃಷಿ ಕೇಂದ್ರದವರು ರೈತರಿಗೆ ಮಾರ್ಗದರ್ಶನ ಮಾಡಿ, ಅವರಿಂದ ಸೀಡ್ಸ್ ತಯಾರಿಸಿ, ಅವರಿಂದ ಕೊಂಡು ರೈತರಿಗೆ ಹಂಚಲು ಕ್ರಮಕೈಗೊಳ್ಳಲಾಗುವುದೇ ;

(ಇ) ಹಾಗಿದ್ದಲ್ಲಿ, ಕಳೆದ ವರ್ಷ ವಿಶ್ವವಿದ್ಯಾಲಯದಲ್ಲಿ ಯಾವ-ಯಾವ ಸೀಡ್ಸ್ ತಯಾರಿಸಲಾಗಿದೆ ; ಹಾಗೂ ಎಷ್ಟು ಜನರಿಗೆ ಮಾರ್ಗದರ್ಶನ ಮಾಡಲಾಗಿದೆ (ಪ್ರತಿಯೊಂದು ಫಾರ್ಮದ ಬಗ್ಗೆ ವಿವರ ಒದಗಿಸುವುದು) ;

(ಈ) ಮಧ್ಯ ಪ್ರದೇಶ ಹಾಗೂ ಹೊರ ರಾಜ್ಯಗಳಿಂದ ಈ ವರ್ಷ ಸೊಯಾಬಿನ್ ಸೀಡ್ಸ್‌ಗಳನ್ನು ಖರೀದಿಸಿ ರೈತರಿಗೆ ಹಂಚಲಾಗುತ್ತಿರುವ ಸಂಗತಿ ನಿಜವೇ ; ಎಷ್ಟು ಮೌಲ್ಯದ ಬೀಜಗಳನ್ನು ಖರೀದಿಸಲಾಗಿದೆ ; ಯಾವ ದರ ಹಾಗೂ ರೈತರಿಗೆ ಯಾವ ದರದಲ್ಲಿ ವಿತರಿಸಲಾಗಿದೆ (ವಿವರ ನೀಡುವುದು) ;

(ಉ) ಈ ವರ್ಷ ಬೆಳಗಾವಿ ಜಿಲ್ಲೆಯಲ್ಲಿ ಕಳಪೆ ಮಟ್ಟದ ಸೋಯಾಬಿನ್ ಬೀಜಗಳನ್ನು ಹಂಚುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಅದನ್ನು ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ ;

(ಊ) ಕರ್ನಾಟಕ ಕೃಷಿ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬೈಲಹೊಂಗಲ ಕೃಷಿ ಸಂಶೋಧನ ಕೇಂದ್ರದಲ್ಲಿ ಯಾವ-ಯಾವ ಬಿತ್ತನೆ ಬೆಳೆಯಲಾಗುತ್ತಿದೆ ; ಈ ಸಂಶೋಧನೆ ಕೇಂದ್ರವು ರೈತರಿಗೆ ಯಾವ-ಯಾವ ರೀತಿಯಿಂದ ಸಹಾಯ ಮಾಡುತ್ತಿದೆ (ವಿವರ ಒದಗಿಸುವುದು) ; ರೈತರಿಗೆ ಸಹಾಯ ಮಾಡಲು ಯಾವ ವಿಶೇಷ ಕ್ರಮ ಹಮ್ಮಿಕೊಳ್ಳಲಾಗಿದೆ ;

(ಋ) ವಿಶ್ವವಿದ್ಯಾಲಯಗಳ ಅಧೀನದಲ್ಲಿರುವ ಕೃಷಿ ಕೇಂದ್ರಗಳು ಹೆಸರಿಗೆ ಮಾತ್ರ ಕೇಂದ್ರಗಳಾಗುತ್ತಿದ್ದು, ಅವುಗಳನ್ನು ಸುಧಾರಿಸಲು ಕ್ರಮ

ಕೈಗೊಳ್ಳಲಾಗುವುದೇ ; ಅವು ಮುಚ್ಚುವಂತೆ ಮಾಡಿ, ಖಾಸಗಿ ಯವರಿಗೆ ಗುತ್ತಿಗೆಗೆ ಕೊಡದಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

## ವಕ್ಫ್ ಆಸ್ತಿ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೩೧೧ (೪೧೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆಯಲ್ಲಿ ಇರುವ ವಕ್ಫ್ ಇಲಾಖೆಗೆ ಸಂಬಂಧಿಸಿದ ಆಸ್ತಿ ಎಷ್ಟು ಇದೆ (ತಾಲ್ಲೂಕುವಾರು ವಿವರ ಒದಗಿಸುವುದು) ;

(ಆ) ಈ ಆಸ್ತಿಯ ಸಲುವಾಗಿ ನ್ಯಾಯಾಲಯದಲ್ಲಿ ಯಾವುದಾದರೂ ಪ್ರಕರಣಗಳು ದಾಖಲಾಗಿರುತ್ತದೆಯೇ (ವಿವರ ಒದಗಿಸುವುದು) ;

(ಇ) ದಾಖಲಾಗಿದ್ದರೆ, ಅವುಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಉಚಿತ ವಿದ್ಯುತ್ ಸರಬರಾಜಿನಿಂದ ಆಗುತ್ತಿರುವ ನಷ್ಟ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೩೧೨ (೪೧೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರೈತರಿಗೆ ಉಚಿತ ವಿದ್ಯುತ್ ಕೊಡುವುದರಿಂದ ವರ್ಷಕ್ಕೆ ಸರ್ಕಾರಕ್ಕೆ ಎಷ್ಟು ಕೋಟಿ ರೂ. ಆರ್ಥಿಕ ಹೊರೆ ಬೀಳುತ್ತಿದೆ ;

(ಆ) ಇದನ್ನು ತಪ್ಪಿಸಲು ಹಾಗೂ ಹೊಣೆ ಕಡಿಮೆ ಮಾಡಲು ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ ;

(ಇ) ರಾಜ್ಯದಲ್ಲಿ ಎಷ್ಟು ಜನ ರೈತರಿಗೆ ಉಚಿತ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ;

(ಈ) ರೈತರಿಗೆ ೨೪ ಗಂಟೆ ವಿದ್ಯುತ್ ಪೂರೈಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ ;

(ಉ) ರೈತರಿಗಾಗಿಯೇ ಪ್ರತ್ಯೇಕ ಎಕ್ಸ್‌ಪ್ರೆಸ್ ಲೈನ್ ಅಳವಡಿಸಿ ನಿರಂತರ ವಿದ್ಯುತ್ ಪೂರೈಕೆ ಮಾಡುವ ಯೋಜನೆ ಯಾವ ಹಂತದಲ್ಲಿದೆ ;

(ಊ) ಎಕ್ಸ್‌ಪ್ರೆಸ್ ಲೈನ್ ಅಳವಡಿಸಿ ರೈತರಿಗೆ ವಿದ್ಯುತ್ ಪೂರೈಸಿದಾಗ ಮೀಟರ್ ಅಳವಡಿಸಿ ಅವರಿಂದ ಹಣ ಪಡೆಯಲಾಗುವುದೇ (ವಿವರ ನೀಡುವುದು) ?

## ರೈತರ ಜಮೀನುಗಳಲ್ಲಿ ವಿವಿಧ ಸಾಮರ್ಥ್ಯದ ಲೈನ್ ಕಂಬಗಳನ್ನು ಅಳವಡಿಸುವ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೩೧೩ (೪೧೮) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರ ಜಮೀನುಗಳಲ್ಲಿ ವಿವಿಧ ಸಾಮರ್ಥ್ಯದ ವಿದ್ಯುತ್ ಕಂಬಗಳನ್ನು ಹಾಕುವ ಹಾಗೂ ಲೈನ್ ಹಾಕದಿರುವ ಕುರಿತು ಇರುವ ನಿಯಮ ಏನು ;

(ಆ) ಅವುಗಳನ್ನು ತೆರವುಗೊಳಿಸಲು ಇರುವ ನಿಯಮ ಏನು ?

## ರಾಜ್ಯದಲ್ಲಿ ಕಬ್ಬಿನ ದರ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)–**

೩೧೪ (೪೨೦) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಹಂಗಾಮಿನಲ್ಲಿ ಸರ್ಕಾರ ಕಬ್ಬಿಗೆ ನಿಗದಿಪಡಿಸಿ ಘೋಷಿಸಿದ ಬೆಲೆ ಎಷ್ಟು ; ಕಾರ್ಖಾನೆಗಳು ನೀಡಿದ ಬೆಲೆಯೆಷ್ಟು ;

(ಆ) ಬೆಳೆಗಾರರಿಗೆ ಆಗಿರುವ ಅನ್ಯಾಯ ಸರಿಪಡಿಸಲು ಘೋಷಿಸಿದ ಬೆಲೆಯನ್ನ ಕೊಡಿಸಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮವೇನು ?

## ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ ಹಾಗೂ ವಕ್ಫ್ ಆಸ್ತಿಗಳು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :-**

೩೧೫ (೪೧೯) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಭಾಷಾ ಅಲ್ಪಸಂಖ್ಯಾತ ಶಾಲಾ ಕಾಲೇಜುಗಳ ಅಭಿವೃದ್ಧಿಗೆ ತೆಗೆದುಕೊಂಡ ಕ್ರಮವೇನು ; ಆ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಯಾವ ಯಾವ ಯೋಜನೆಯನ್ನು ಸರ್ಕಾರ ಕೊಡುತ್ತಿದೆ ;

(ಆ) ಭಾಷಿಕ, ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ಕೊಡ ಮಾಡಿರುವ ಸೌಲಭ್ಯಗಳು ಹಾಗೂ ರಿಯಾಯಿತಿ ವಿನಾಯಿತಿ ಗಳೇನು ;

(ಇ) ಭಾಷಿಕ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳ ವಿಭಾಗಗಳಲ್ಲಿ ಇರಬೇಕಾದ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

(ಈ) ಮಹಾರಾಷ್ಟ್ರದ ಮಾದರಿಯಲ್ಲಿ ಭಾಷಿಕ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯೆಂದು ಸ್ಥಾನಮಾನ ಪಡೆದರೆ ಅದರಡಿ ಆರಂಭಿಸಿರುವ ಶಾಲಾ ಕಾಲೇಜುಗಳು ಪ್ರತ್ಯೇಕವಾಗಿ ಪಡೆಯಬೇಕಾದ ಅಗತ್ಯ ಇಲ್ಲ ಎನ್ನುವ ನಿಯಮವನ್ನು ಜಾರಿಗೆ ತರಲಾಗುವುದೇ ;

(ಉ) ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಭಾಷಾ ಅಲ್ಪಸಂಖ್ಯಾತ ಸ್ಥಾನಮಾನ ಪಡೆದ ಶಾಲೆಗಳು ಹಾಗೂ ಸಂಸ್ಥೆಗಳ ಹೆಸರು, ವಿಳಾಸ ಹಾಗೂ ನಡೆಸುತ್ತಿರುವ ಕೋರ್ಸ್‌ಗಳ ವಿವರ ನೀಡುವುದು ;

ಅ) ಭಾಷಾ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸೌಲಭ್ಯಗಳೇನು ;

ಆ) ಈ ಸಂಸ್ಥೆಗಳಿಗೆ ನೀಡಿರುವ ರಿಯಾಯಿತಿ, ವಿನಾಯ್ತಿಗಳೇನು ಹಾಗೂ ಸೌಲಭ್ಯಗಳೇನು ;

ಇ) ಇವುಗಳ ಅಭಿವೃದ್ಧಿಗೆ ಸರ್ಕಾರ ಒದಗಿಸುತ್ತಿರುವ ಅನುದಾನವೆಷ್ಟು ;

(ಊ) ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿರುವ ವಕ್ಫ್ ಆಸ್ತಿಗಳ ಹೆಸರು ವಿಳಾಸ ಸಹಿತ ಪಟ್ಟಿ ನೀಡುವುದು ಹಾಗೂ ಇಲ್ಲಿ ನಡೆಯುತ್ತಿರುವ ಶಿಕ್ಷಣ ಸಂಸ್ಥೆಗಳ ಪಟ್ಟಿ ನೀಡುವುದು ; ಅವುಗಳ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮದ ವಿವರ ಹಾಗೂ ಅವುಗಳ ಸ್ಥಿತಿಗತಿಯ ವಿವರ ನೀಡುವುದು ?

## ತಿ. ನರಸಿಪುರವನ್ನು ಪುರಸಭೆಯನ್ನಾಗಿ ಮಾಡುವುದು

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್) ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೧೬ (೪೨೨) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತಿ. ನರಸಿಪುರವನ್ನು ಪುರಸಭೆಯನ್ನಾಗಿ (TMC) ಘೋಷಿಸಲು ಇರುವ ಅಡೆತಡೆಗಳೇನು ;

(ಆ) ತಿ. ನರಸಿಪುರವನ್ನು ಯಾವಾಗ ಪುರಸಭೆಯನ್ನಾಗಿ ಪರಿವರ್ತಿಸಿ ಘೋಷಿಸಲಾಗುವುದು ;

(ಇ) ತಾಲ್ಲೂಕು ಕಛೇರಿ ಮುಖ್ಯರಸ್ತೆಯಿಂದ NH ೨೧೨ ರವರೆಗೆ ೮೦ ಅಡಿ ರಸ್ತೆಯನ್ನು ನಿರ್ಮಿಸಲು, ಪ್ರಮುಖ ಸಾರ್ವಜನಿಕ ರಸ್ತೆಗಳಾದ ಮಾರುಕಟ್ಟೆ ರಸ್ತೆ, ಲಿಂಕ್ ರಸ್ತೆಯ ವಿಸ್ತರಣೆ ಮತ್ತು ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳಲಾಗುವುದೇ ?

## ಚಾಮರಾಜನಗರ-ಗುಂಡ್ಲುಪೇಟೆ, ಮೈಸೂರು-ಮಳವಳ್ಳಿ ರಸ್ತೆ ಅಭಿವೃದ್ಧಿ

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೧೭ (೪೨೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಾಮರಾಜನಗರ-ಗುಂಡ್ಲುಪೇಟೆ ರಸ್ತೆಯು ಗುಂಡಿಬಿದ್ದು ಹದಗೆಟ್ಟು ಸಂಚಾರಕ್ಕೆ ತೀವ್ರ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೇ ; ಈ ರಸ್ತೆಯ ದುರಸ್ತಿಗೆ ಕಳೆದ ವರ್ಷ ಬಿಡುಗಡೆ ಆದ ಹಣ ಎಷ್ಟು ; ಕೈಗೊಂಡ ಕಾಮಗಾರಿಗಳು ಯಾವುವು ; ಈ ರಸ್ತೆಯನ್ನು ವಿಸ್ತರಿಸಿ ದ್ವಿಪಥ ರಸ್ತೆಯನ್ನಾಗಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಆ) ಮಳವಳ್ಳಿ–ಮೈಸೂರು (ಬನ್ನೂರು ಮೂಲಕ) ರಸ್ತೆಯನ್ನು ಎರಡು ಪಥದ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ (ವಿವರ ಒದಗಿಸುವುದು) ?

## ಬೆಂಗಳೂರು ಮೈಸೂರು ಹೆದ್ದಾರಿಗೆ ಪರ್ಯಾಯವಾಗಿ ಕನಕಪುರ ಮೈಸೂರು ರಸ್ತೆಯ ಅಭಿವೃದ್ಧಿ

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೧೮ (೪೨೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮೈಸೂರು ಹೆದ್ದಾರಿಗೆ ಪರ್ಯಾಯವಾಗಿ ಕನಕಪುರ ಮೂಲಕ ಹಾದು ಹೋಗುವ ಹೆದ್ದಾರಿಯನ್ನು ಅಭಿವೃದ್ಧಿಪಡಿಸಲು ರಾಜ್ಯ ಲೋಕೋಪಯೋಗಿ ಇಲಾಖೆಯು ಕೇಂದ್ರ ಭೂ ಸಾರಿಗೆ ಸಚಿವಾಲಯಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದೆಯೇ (ವಿವರ ಒದಗಿಸುವುದು) ;

(ಆ) ಮೈಸೂರು ಬೆಂಗಳೂರು ರಸ್ತೆಯನ್ನು ಆರುಪಥದ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದೆಯೇ (ವಿವರ ಒದಗಿಸುವುದು) ?

## ಬೀದರ್ ಜಿಲ್ಲೆಯಲ್ಲಿ ಇಂಧನ ಇಲಾಖೆಯ ಯೋಜನೆಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೧೯ (೪೨೫) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಇಂಧನ ಇಲಾಖೆಯ ವತಿಯಿಂದ ಪ್ರಗತಿಯಲ್ಲಿರುವ ಯೋಜನೆಗಳಾವುವು ; ಅವುಗಳಿಗೆ ಮೀಸಲಿಟ್ಟ ಹಣವೆಷ್ಟು (ಎಲ್ಲಾ ವಿಧಾನಸಭಾವಾರು ಮತ್ತು ಯೋಜನೆಗಳವಾರು ವಿವರ ಒದಗಿಸುವುದು);

(ಆ) ಜಿಲ್ಲೆಯಲ್ಲಿ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳಾವುವು ; ಅವುಗಳ ರೂಪರೇಷೆಗಳೇನು (ಯೋಜನೆ ಮತ್ತು ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು) ;

(ಇ) ಜಿಲ್ಲೆಗೆ ಇಲಾಖೆಯ ವತಿಯಿಂದ ಕೇಂದ್ರ ಮತ್ತು ರಾಜ್ಯ ಸರಕಾರದ ಯಾವುದಾದರೂ ಪ್ರಸ್ತಾವನೆಗಳೇನಾದರೂ ಬಂದಿವೆಯೇ ; ಹಾಗಿದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು) ?

03357-3

## ವಿದ್ಯುತ್ ಸಂಸ್ಥೆಗಳಿಗೆ ಬರಬೇಕಾದ ಬಾಕಿ ಹಣ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೨೦ (೪೭೧) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ವಿದ್ಯುತ್ ನಿಗಮ ಮತ್ತು ರಾಜ್ಯದ ವಿದ್ಯುತ್ ಸರಬರಾಜು ಸಂಸ್ಥೆಗಳಿಗೆ ಸರ್ಕಾರ ಹಾಗೂ ವಿವಿಧ ಸಂಸ್ಥೆಗಳು ಮತ್ತು ವ್ಯಕ್ತಿಗಳಿಂದ ಬರಬೇಕಾಗಿರುವ ಬಾಕಿ ಹಣದ ಮೊತ್ತ ಎಷ್ಟು (ಪ್ರತಿ ಪ್ರಕರಣದ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು);

(ಆ) ಈ ಹಣವನ್ನು ಎಷ್ಟು ಅವಧಿಯಿಂದ ಬಾಕಿ ಉಳಿಸಿಕೊಳ್ಳಲಾಗಿದೆ ;

(ಇ) ಈ ಬಾಕಿ ಹಣವನ್ನು ವಸೂಲು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಕಬ್ಬು ಖರೀದಿ ತೆರಿಗೆಯ ಬಾಕಿ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೨೧ (೪೭೦) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಯಾವ ಯಾವ ಸಕ್ಕರೆ ಕಾರ್ಖಾನೆಗಳು ಕಬ್ಬು ಖರೀದಿ ತೆರಿಗೆಯನ್ನು ಸರ್ಕಾರಕ್ಕೆ ಪಾವತಿ ಮಾಡಲು ಬಾಕಿ ಉಳಿಸಿಕೊಂಡಿವೆ ; ಎಷ್ಟು ಅವಧಿಯಿಂದ ಈ ಬಾಕಿಯನ್ನು ಉಳಿಸಿಕೊಂಡು ಬಂದಿವೆ ;

(ಆ) ಪ್ರತಿ ಕಾರ್ಖಾನೆಯಿಂದ ಎಷ್ಟೆಷ್ಟು ಮೊತ್ತದ ತೆರಿಗೆ ಸರ್ಕಾರಕ್ಕೆ ಬಾಕಿ ಬರಬೇಕಾಗಿದೆ (ಕಾರ್ಖಾನೆವಾರು ವಿವರಗಳನ್ನು ಒದಗಿಸುವುದು) ;

(ಇ) ಸರ್ಕಾರಕ್ಕೆ ಬರಬೇಕಾದ ಈ ತೆರಿಗೆ ಹಣವನ್ನು ವಸೂಲು ಮಾಡಲು ಕೈಗೊಂಡಿರುವ ಕ್ರಮಗಳೇನು ?

## ಬೀದರ್ ಜಿಲ್ಲೆಯ ರಸ್ತೆಗಳು ಹಾಳಾಗಿರುವುದು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೨೨ (೪೨೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆಯ ಲೋಕೋಪಯೋಗಿ ಇಲಾಖೆ ವತಿಯಿಂದ ಪ್ರಗತಿಯಲ್ಲಿರುವ ಕಾಮಗಾರಿಗಳಾವುವು; ಅವುಗಳಿಗೆ ಮೀಸಲಿಟ್ಟ ಹಣವೆಷ್ಟು; (ವಿಧಾನಸಭಾವಾರು, ಯೋಜನೆವಾರು ವಿವರ ನೀಡುವುದು)

(ಆ) ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಹಾಳಾದ ರಸ್ತೆಗಳ ನಿರ್ಮಾಣಕ್ಕೆ ಸರ್ಕಾರದಿಂದ ಎಷ್ಟು ಅನುದಾನ ನೀಡಲಾಗಿದೆ ; (ರಸ್ತೆವಾರು ಅನುದಾನದ ವಿವರ ಒದಗಿಸುವುದು)

(ಇ) ಹಾಗಿದ್ದಲ್ಲಿ, ಯಾವ ಯಾವ ರಸ್ತೆಗಳ ನಿರ್ಮಾಣಕ್ಕೆ ಎಷ್ಟು ಹಣ ನೀಡಲಾಗಿದೆ (ಕಿ.ಮೀ. ಸಹಿತ ಮತ್ತು ಗುತ್ತಿಗೆದಾರರ ಹೆಸರುಗಳೊಂದಿಗೆ ವಿವರ ನೀಡುವುದು)?

## ಪೌರಾಡಳಿತ ಸ್ಥಳೀಯ ಸಂಸ್ಥೆಗಳಲ್ಲಿ ಕಳಂಕಿತ ಅಧಿಕಾರಿಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೨೩ (೪೨೪) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪೌರಾಡಳಿತ ಇಲಾಖೆಯ ನಗರ ಸ್ಥಳೀಯ ಸಂಸ್ಥೆಗಳು, ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್‌ಗಳಲ್ಲಿನ ಯೋಜನೆಗಳ ಅನುಷ್ಠಾನದಲ್ಲಿ ಭ್ರಷ್ಟಾಚಾರ ಮತ್ತು ಹಣ ದುರುಪಯೋಗದ ಎಷ್ಟು ಪ್ರಕರಣಗಳು ಪತ್ತೆಯಾಗಿದೆ. ಎಲ್ಲಾ ಸಂಸ್ಥೆಗಳವಾರು ವಿವರ ನೀಡುವುದು;

(ಆ) ಪ್ರತಿ ಪ್ರಕರಣಗಳಲ್ಲಿ ದುರುಪಯೋಗವಾಗಿರುವ ಹಣದ ಮೊತ್ತವೆಷ್ಟು; (ವಿವರಗಳನ್ನು ನೀಡುವುದು) ಈ ಬಗ್ಗೆ ಇಲ್ಲಿಯವರೆಗೆ ಯಾವ ಯಾವ ಸಂಸ್ಥೆಗಳು ಸರಕಾರಕ್ಕೆ ವರದಿ ಸಲ್ಲಿಸಿವೆ; ಈ ವರದಿಯ ವಿವರ ನೀಡುವುದು;

(ಇ) ಈ ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಹೆಸರು ಮತ್ತು ಪದನಾಮದ ವಿವರ ನೀಡುವುದು;

(ಈ) ಹಾಗಿದ್ದಲ್ಲಿ, ಸರಕಾರದ ಬೊಕ್ಕಸಕ್ಕೆ ೩ ವರ್ಷಗಳಲ್ಲಿ ಆಗಿರುವ ನಷ್ಟದ ಮಾಹಿತಿಯನ್ನು ಒದಗಿಸುವುದು, ಹಾಗೆ ಸರಕಾರವು ತಪ್ಪಿತಸ್ಥರ ವಿರುದ್ಧ ಇಲ್ಲಿವರೆಗೆ ಕೈಗೊಂಡಿರುವ ಕ್ರಮಗಳೇನು; ಸಂಸ್ಥೆಗಳವಾರು ವಿವರ ನೀಡುವುದು?

## ಅಕಾಲಿಕ ಮಳೆಗೆ ತೋಟಗಾರಿಕೆ ಬೆಳೆಗಳು ಹಾನಿಯಾಗಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೨೪ (೪೨೮) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿಯ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಯೋಜನೆಯಡಿ ಶೇ.೯೦ರಷ್ಟು ಸಹಾಯಧನ ಹೆಚ್ಚಿಸಿದ್ದು, ಕಳೆದ ಸಾಲಿನಲ್ಲಿ ರೈತರಿಗೆ ನೀಡಿರುವ ಸಹಾಯಧನ ಎಷ್ಟು; ರೈತರಿಗೆ ಇನ್ನೂ ಸಂದಾಯ ಮಾಡದೇ ಇರುವ ಸಹಾಯಧನ ಎಷ್ಟು; ಜಿಲ್ಲಾವಾರು ಮಾಹಿತಿ ನೀಡುವುದು; ಒಂದು ವೇಳೆ ಸಹಾಯಧನ ಬಿಡುಗಡೆಗೆ ವಿಳಂಬವಾಗಿದ್ದರೆ, ಅದನ್ನು ರೈತರ ಖಾತೆಗಳಿಗೆ ಯಾವಾಗ ಸಂದಾಯ ಮಾಡುವಿರಿ;

(ಆ) ಉತ್ತರ ಕರ್ನಾಟಕದಲ್ಲಿ ಅಕಾಲಿಕ ಮಳೆಯಿಂದಾಗಿ ದ್ರಾಕ್ಷಿ ಹಾಗೂ ದಾಳಿಂಬೆ ಬೆಳೆಗಳು ಹಾನಿಯಾಗಿ ರೈತರು ತೊಂದರೆಗೆ ಸಿಲುಕಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ರಾಜ್ಯದಲ್ಲಿ ಎಷ್ಟು ಹೆಕ್ಟೇರ್ ಪ್ರದೇಶ ಹಾನಿಗೊಳಗಾಗಿದೆ; ಹಾನಿಗೊಳಗಾದ ರೈತರಿಗೆ ಪರಿಹಾರ ವಿತರಿಸಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಜನ ರೈತರಿಗೆ ಪರಿಹಾರ ನೀಡಲಾಗಿದೆ ಮತ್ತು ಪ್ರತಿ ಹೆಕ್ಟೇರಿಗೆ ಪರಿಹಾರ ನೀಡಿದ ಮೊತ್ತವೆಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೨೫ (೪೨೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿ ೪ (ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ)ರಲ್ಲಿರುವ ಟೋಲ್ ಸಂಗ್ರಹಣೆ ಕೇಂದ್ರಗಳೆಷ್ಟು; ಟೋಲ್ ಸಂಗ್ರಹಣೆ ಮಾಡಲು ಇರುವ ಸರ್ಕಾರದ ಮಾನದಂಡಗಳೇನು; ಸರ್ಕಾರದ ಮಾನದಂಡಗಳನ್ನು ಮೀರಿ ಟೋಲ್ ಸಂಗ್ರಹಣ ಕೇಂದ್ರಗಳಲ್ಲಿ ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇಂತಹ ಸಾರ್ವಜನಿಕ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಆ) ರಾಷ್ಟ್ರೀಯ ಹೆದ್ದಾರಿ ಪುಣೆ-ಬೆಂಗಳೂರು ಹೆದ್ದಾರಿಯು ಮಧ್ಯದಲ್ಲಿರುವ ಹುಬ್ಬಳ್ಳಿ-ಧಾರವಾಡ ನಗರಗಳ ಮಧ್ಯೆ ಇರುವ ಬೈಪಾಸ್ ರಸ್ತೆಯನ್ನು ಚತುಷ್ಪಥ ರಸ್ತೆಯ ಪ್ರಸ್ತಾವನೆಯನ್ನು ಸಲ್ಲಿಸಲು ಮೆ. ನಂದಿ ಹೈವೆ ಡೆವಲಪರ್ಸ್, ಬೆಂಗಳೂರು, ಇವರಿಗೆ ಸೂಚಿಸಲಾಗಿದೆಯೇ; ಹಾಗಿದ್ದಲ್ಲಿ, ಸದರಿ ಕಂಪನಿಯವರು ಪ್ರಸ್ತಾವನೆಯನ್ನು ಸಲ್ಲಿಸಿರುವರೇ; ಒಂದು ವೇಳೆ ಪ್ರಸ್ತಾವನೆಯನ್ನು ಸಲ್ಲಿಸದೇ ಇದ್ದಲ್ಲಿ ಸರ್ಕಾರವು ಕೈಗೊಂಡ ಕ್ರಮವೇನು; ಈ ರಸ್ತೆಯಲ್ಲಿ ಅತೀ ಹೆಚ್ಚು ವಾಹನಗಳ ಸಂಚಾರ ಇರುವುದರಿಂದ ಹೆಚ್ಚು ಅಪಘಾತಗಳು ಸಂಭವಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

## ರೈತರ ಕಬ್ಬಿನ ಬೆಲೆ ಸಹಾಯಧನ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೨೬ (೪೩೦) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೩-೧೪ನೇ ಸಾಲಿಗೆ ಕರ್ನಾಟಕ ರಾಜ್ಯ ಸರ್ಕಾರವು ಕಬ್ಬಿನ ಬೆಲೆಯನ್ನು ರೂ.೨೫೦೦/- ಪ್ರತಿ ಟನ್‌ಗೆ ನಿರ್ಧರಿಸಿರುವ ಆದೇಶವು ಇನ್ನೂ ಜಾರಿಗೆ ಬರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಇದನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬ ಧೋರಣೆ ಏಕೆ;

(ಇ) ಕಬ್ಬಿನಿಂದ ಉತ್ಪತ್ತಿಯಾಗುವ ಉಪ-ಉತ್ಪನ್ನಗಳಿಂದ ಪ್ರತಿ ಮೆಟ್ರಿಕ್ ಟನ್‌ನಿಂದ ಸರ್ಕಾರಕ್ಕೆ ಬರುವ ಒಟ್ಟು ಆದಾಯವೆಷ್ಟು; (ವಿವರ ಒದಗಿಸುವುದು)

(ಈ) ಹಾಗಿದ್ದಲ್ಲಿ, ಕಬ್ಬಿಗೆ ಬೆಂಬಲ ಬೆಲೆ ಒದಗಿಸುವಲ್ಲಿ ಸರ್ಕಾರದ ನಿಲುವೇನು?

## ಸಿಮೆಂಟ್ ರಸ್ತೆ ನಿರ್ಮಿಸದೆ ಟೋಲ್ ಸಂಗ್ರಹ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೨೭ (೪೩೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರ ಆದೇಶ ಧಿಕ್ಕರಿಸಿ ಕಾನೂನು ಬಾಹಿರವಾಗಿ ನೈಸ್ ಸಂಸ್ಥೆ ಟೋಲ್ ಹಣವನ್ನು ಸಂಗ್ರಹ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ನೈಸ್ ಸಂಸ್ಥೆಯವರು ಮೂಲ ಒಪ್ಪಂದದಲ್ಲಿ ಸಿಮೆಂಟ್ ರಸ್ತೆ ನಿರ್ಮಾಣ ಮಾಡಿದರೆ ಮಾತ್ರ ಟೋಲ್ ಹಣ ಪಡೆಯಲು ಅನುಮತಿ ನೀಡಲಾಗುವುದು ಎಂಬ ಅಂಶ ನಿಜವೇ ;

(ಇ) ಲಾರಿ ಮಾಲೀಕರ ಮೇಲೆ ಗದಾಪ್ರಹಾರ ನಡೆಸಿ ಹಣ ಸಂಗ್ರಹ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮವೇನು;

(ಈ) ಸಿಮೆಂಟ್ ರಸ್ತೆ ನಿರ್ಮಾಣ ಯಾವ ಹಂತದಲ್ಲಿದೆ; ಸಿಮೆಂಟ್ ರಸ್ತೆ ನಿರ್ಮಾಣವಾಗದೇ ಟೋಲ್ ಸಂಗ್ರಹ ನಡೆಯುತ್ತಿರುವ ಬಗ್ಗೆ ಪ್ರತಿಭಟನೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ನಿಲುವೇನು; ವಿವರ ನೀಡುವುದು?

## ಸರ್ಕಾರದ ಸಹಾಯ ಧನವನ್ನು ಖಾಸಗಿ ಡೇರಿಗಳಿಗೆ ಹಾಲು ಹಾಕುತ್ತಿರುವ ಉತ್ಪಾದಕರಿಗೂ ನೀಡುವ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೨೮ (೪೩೨) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ಸಹಾಯಧನವನ್ನು ನೀಡುವಂತೆ ಹಟ್ಸನ್ ಡೇರಿಗಳಿಗೆ ಹಾಲು ಹಾಕುವ ಉತ್ಪಾದಕರು ಪಟ್ಟಣದಲ್ಲಿ ಹಾಲು ಬೀದಿಗೆ ಚೆಲ್ಲಿ ಪ್ರತಿಭಟನೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಲ್ಲಿ ಇಬ್ಬಗೆ ನೀತಿ, ಧೋರಣೆ ಇರುವುದು ನಿಜವೆ; ಹಾಗಿದ್ದಲ್ಲಿ ಸರ್ಕಾರವು ಕೈಗೊಂಡ ಕ್ರಮವೇನು;

(ಆ) ಮಹಾಮಂಡಲ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಾಲಿನ ಡೇರಿಗಳಿಗೆ ಸಮಾನವಾದ ಬೆಲೆ ಖಾಸಗಿ ಡೇರಿಗಳಿಗೆ ಸಿಗದ

ಕಾರಣ ಹಟ್ಸನ್ ಕಂಪನಿಯವರು ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ವ್ಯಾಪ್ತಿಯಲ್ಲಿ ಆರಂಭಿಸಿದ್ದ ೫ ಶಿಥಿಲೀಕರಣ ಕೇಂದ್ರಗಳನ್ನು ಮುಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ವಿವರ ನೀಡುವುದು;

(ಇ) ಖಾಸಗಿಯವರು ಡೇರಿ ಮುಚ್ಚುವ ಪರಿಸ್ಥಿತಿಯಿಂದ ಅನೇಕ ಕಾರ್ಮಿಕರು ಸಾವಿರಾರು ರೈತರು ಬೀದಿ ಪಾಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಟ್ಸನ್ ಕಂಪನಿಯವರು ಎಲ್ಲಾ ಹಾಲು ಶಿಥಿಲೀಕರಣ ಕೇಂದ್ರವನ್ನು ಮುಚ್ಚುವುದರೊಂದಿಗೆ ಹಾಲು ಸಂಗ್ರಹಣೆ ಸ್ಥಗಿತಗೊಳಿಸುವುದಾಗಿ ಹೇಳಿಕೊಂಡಿರುವುದರಿಂದ ತೊಂದರೆಯುಂಟಾದಲ್ಲಿ ಸರ್ಕಾರದ ನಿಲುವೇನು, ವಿವರ ನೀಡುವುದು?

## ಕಬ್ಬು ಬೆಳೆಗಾರರ ಬೆಲೆ ನಿಗದಿ ಮತ್ತು ಸಕ್ಕರೆ ಕಾರ್ಖಾನೆಗಳ ಬಗ್ಗೆ

**ಶ್ರೀ ಅಶ್ವತ್‌ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೨೯ (೪೩೨) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಬ್ಬು ಬೆಳೆಗಾರರು ಪ್ರತಿ ಟನ್‌ಗೆ ೨೫೦೦ ರೂ. ಬೆಲೆ ನಿಗದಿ ಮಾಡಿದ್ದರು, ರೈತರಿಗೆ ಹಣ ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಪಾವತಿಸದಿರಲು ಕಾರಣವೇನು; ಇದರಿಂದ ತೊಂದರೆಗೆ ಒಳಪಟ್ಟ ರೈತರಿಗೆ ಸರ್ಕಾರ ಯಾವ ರೀತಿ ಸ್ಪಂಧಿಸಿದೆ;

(ಆ) ಮಂಡ್ಯದ ಮೈ–ಶುಗರ್ ಹಾಗೂ ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ೨೦೧೩–೧೪ರಲ್ಲಿ ಅರೆದಿರುವ ಕಬ್ಬಿನ ಪ್ರಮಾಣವೆಷ್ಟು; ಇದರಲ್ಲಿ ಎಷ್ಟು ಟನ್ ಸಕ್ಕರೆ ಉತ್ಪತ್ತಿಯಾಗಿದೆ;

(ಇ) ರೈತರಿಂದ ಪಡೆದು ಅರೆಯುವ ಕಬ್ಬಿನಿಂದ ಉತ್ಪತ್ತಿಯಾಗುವ ಉಪ ಉತ್ಪನ್ನಗಳು ಯಾವುವು; ಸದರಿ ಉಪ ಉತ್ಪನ್ನಗಳಿಂದ ಕಂಪನಿಗಳಿಗೆ (Mysugar/PSSK) ೨೦೧೨-೧೩ ಮತ್ತು ೨೦೧೩-೧೪ರಲ್ಲಿ ಬಂದಿರುವ ಲಾಭವೆಷ್ಟು;

(ಈ) ಮೈಶುಗರ್ ಹಾಗೂ PSSK ಕಾರ್ಖಾನೆಗಳು ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಿಂದ ಪಡೆದಿರುವ ಸಾಲದ ಮೊತ್ತವೆಷ್ಟು; ಅದಕ್ಕೆ ಕೊಡಬೇಕಾಗಿರುವ ಬಡ್ಡಿ ಎಷ್ಟು; ಹಾಗೂ ಯಾವ ವರ್ಷದಲ್ಲಿ ಸಾಲ ಪಡೆದಿವೆ, ವರ್ಷವಾರು ವಿವರ ನೀಡುವುದು;

(ಉ) ಕಳೆದ ವರ್ಷ ಕೇಂದ್ರ ಸರ್ಕಾರದಿಂದ ದೇಶದ ಸಕ್ಕರೆ ಕಂಪನಿಗಳಿಗೆ ಬಡ್ಡಿರಹಿತ ಸಾಲ ನೀಡುವುದಾಗಿ ಹೇಳಿತ್ತು, ಅದೇ ರೀತಿ ರಾಜ್ಯದ ಯಾವ ಯಾವ ಸಕ್ಕರೆ ಕಂಪನಿಗಳಿಗೆ ಕೇಂದ್ರ ಸರ್ಕಾರದ ಬಡ್ಡಿರಹಿತ ಸಾಲ ದೊರೆತಿದೆ;

(ಊ) ಕೇಂದ್ರ ಸರ್ಕಾರ ಸಾಲ ನೀಡುವಾಗ ಯಾವ ಯಾವ ಕೆಲಸಗಳಿಗೆ/ ಉದ್ದೇಶಗಳಿಗೆ ಸಾಲ ನೀಡಲಾಗುತ್ತದೆ ?

## ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನಲ್ಲಿರುವ ಎಳನೀರು ಮಾರುಕಟ್ಟೆ

**ಶ್ರೀ ಅಶ್ವತ್‌ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೩೦ (೪೭೩) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನಲ್ಲಿರುವ ಎಳನೀರು ಮಾರುಕಟ್ಟೆ ಏಷ್ಯಾಯಾದಲ್ಲಿಯೇ ದೊಡ್ಡ ಮಾರುಕಟ್ಟೆ, ಇದರ ಪ್ರಾಂಗಣದಲ್ಲಿ ಹರಾಜು ಕಟ್ಟೆ ಸಮಸ್ಯೆ, ಹದಗೆಟ್ಟ ರಸ್ತೆ, ಶೌಚಾಲಯದ ಸಮಸ್ಯೆ,

ಜಾಗದ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ತೆಗೆದುಕೊಂಡಿರುವ ಕ್ರಮವೇನು;

(ಆ) ಎಳನೀರು ಮಾರುಕಟ್ಟೆ ಪಕ್ಕದಲ್ಲಿ TAPCMS ಗೆ ಸಂಬಂಧಪಟ್ಟಂತೆ ಎರಡು ಎಕರೆ ಖಾಲಿ ಜಾಗವಿರುವುದನ್ನು ಸಂಬಂಧಪಟ್ಟ ಇಲಾಖೆ ಸ್ಥಳೀಯ ಪ್ರತಿನಿಧಿಗಳ ಒಪ್ಪಿಗೆ ಪಡೆದು ಎಳನೀರು ಮಾರುಕಟ್ಟೆಗೆ ಪಡೆಯಬಹುದಲ್ಲವೇ?

## ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳ ಅಗಲೀಕರಣದ ಸಂದರ್ಭದಲ್ಲಿ ಮರಗಳನ್ನು ಕಡಿಯಲು ಹಾಗೂ ಬೆಳೆಸಲು ಅನುಸರಿಸುವ ಕ್ರಮ

**ಶ್ರೀ ಸಿ.ಎಚ್. ವಿಜಯ ಶಂಕರ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೩೧ (೪೩೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿ ಅಗಲೀಕರಣದ ಸಂದರ್ಭದಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಬೆಳೆದುನಿಂತ ಸಾಲು ಮರಗಳನ್ನು ತೆರವುಗೊಳಿಸುವಾಗ ಪ್ರಸ್ತುತ ಜಾರಿಯಲ್ಲಿರುವ ನಿಯಮಗಳೇನು;

(ಆ) ಕಳೆದ ೧೦ ವರ್ಷಗಳಲ್ಲಿ ಹೆದ್ದಾರಿ ಅಗಲೀಕರಣದ ಕಾರಣಕ್ಕಾಗಿ ರಾಜ್ಯದಲ್ಲಿ ಕತ್ತರಿಸಿ ಹಾಕಲಾದ ಒಟ್ಟು ಮರಗಳ ಸಂಖ್ಯೆ ಎಷ್ಟು;

(ಇ) ರಸ್ತೆ ಅಗಲೀಕರಣ ಪೂರ್ಣಗೊಂಡ ನಂತರ ಸಕಾಲದಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಪುನಃ ಮರಗಳನ್ನು ನೆಟ್ಟು ಬೆಳೆಸಲು ಹಾಗೂ ಯಥಾಸ್ಥಿತಿ ಕಾಯ್ದುಕೊಳ್ಳಲು ತೆಗೆದುಕೊಳ್ಳುತ್ತಿರುವ ಕ್ರಮಗಳೇನು;

(ಈ) ಸಕಾಲದಲ್ಲಿ ಪುನಃ ಮರಗಳನ್ನು ನೆಟ್ಟು ಬೆಳೆಸಲು ವಿಫಲರಾದಲ್ಲಿ ಈ ಜವಾಬ್ದಾರಿಯನ್ನು ಹೇಗೆ ನಿರ್ವಹಿಸಲಾಗುತ್ತದೆ; ಹಾಗೂ ಇಂತಹ ಸನ್ನಿವೇಶಗಳಲ್ಲಿ ಇಲಾಖೆ ತೆಗೆದುಕೊಳ್ಳಬಹುದಾದ ಕಾನೂನಾತ್ಮಕ ಕ್ರಮಗಳೇನು?

## ರೈತರಿಗೆ ನೀರು ಬಳಸುವ ಬಗ್ಗೆ ತಿಳುವಳಿಕೆ ನೀಡುವ ವಿಚಾರವಾಗಿ

**ಶ್ರೀ ಸಿ.ಎಚ್. ವಿಜಯ ಶಂಕರ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೩೨ (೪೩೫) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರ ಜಮೀನಿಗೆ ನೀರು ಕೊಡುವುದರ ಜೊತೆಗೆ ನೀರು ಬಳಕೆ ವಿಧಾನವನ್ನು ರೈತರಿಗೆ ತಿಳಿಸಿ ಕೊಡಲಾಗುತ್ತಿದೆಯೇ;

(ಆ) ಸದರಿ ಭಾಗದ ಭೂಮಿಯ ಮಣ್ಣಿನ ಫಲವತ್ತತೆ ಮತ್ತು ಅದರ ಗುಣಮಟ್ಟ ಹಾಗೂ ಆಯಾ ಭಾಗದಲ್ಲಿ ಬೀಳುವ ಸರಾಸರಿ ಮಳೆಯ ಪ್ರಮಾಣ ಆಧಾರದ ಮೇಲೆ ಅದಕ್ಕನುಗುಣವಾಗಿ ಯಾವ ಪ್ರಮಾಣದ ನೀರು ಭೂಮಿಗೆ ಒದಗಿಸಬೇಕೆಂದು ವೈಜ್ಞಾನಿಕ ಪದ್ಧತಿಯನ್ನು ಇಲಾಖೆಯಲ್ಲಿ ಅನುಸರಿಸಲಾಗುತ್ತಿದೆ;

(ಇ) ಅಗತ್ಯಕ್ಕಿಂತ ಹೆಚ್ಚು ನೀರು ಬಳಸಿ ಭೂಮಿಯ ಗುಣಮಟ್ಟ ಹಾಳಾಗಿದ್ದಲ್ಲಿ ಹಾಗೂ ಬಂಜರು ಪ್ರದೇಶವಾಗಿ ಪರಿವರ್ತಿತವಾದ ಸನ್ನಿವೇಶದಲ್ಲಿ ಸದರಿ ಭೂಮಿಯ ಫಲವತ್ತತೆ ಗುಣಮಟ್ಟವನ್ನು ಸಕಾಲದಲ್ಲಿ ಸರಿಪಡಿಸಿಕೊಳ್ಳಲು ಇಲಾಖೆಯಲ್ಲಿ ಅನುಸರಿಸುತ್ತಿರುವ ಕ್ರಮಗಳೇನು?

## ರಾಜ್ಯದಲ್ಲಿನ ವಿದ್ಯುತ್ ಅವಘಡಗಳ ಕುರಿತು

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೩೩೩ (೪೩೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೫ ವರ್ಷಗಳಲ್ಲಿ ರಾಜ್ಯದಲ್ಲಿ ವಿದ್ಯುತ್ ಅವಘಡಕ್ಕೆ ಸಿಕ್ಕಿ ಗಾಯಗೊಂಡ ಮತ್ತು ಮರಣ ಹೊಂದಿದವರ ಸಂಖ್ಯೆ ಎಷ್ಟು; ಅವರುಗಳಿಗೆ ಒದಗಿಸಲಾದ ಪರಿಹಾರ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಈ ವಿದ್ಯುತ್ ಅವಘಡಗಳಿಗೆ ಕಾರಣವಾದ ಅಂಶಗಳ ಕುರಿತ ಮಾಹಿತಿ ಸರ್ಕಾರಕ್ಕೆ ಇದೆಯೇ; ಹಾಗಿದ್ದಲ್ಲಿ, ಕಾರಣವಾದ ಅಂಶಗಳು ಮತ್ತು ಇವುಗಳನ್ನು ನಿವಾರಿಸಿಕೊಳ್ಳುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳು ಏನು, ಮಾಹಿತಿ ಒದಗಿಸುವುದು?

## ವಾಣಿಜ್ಯ ಪುಷ್ಪಗಳ ಬೆಳೆ ಬಗ್ಗೆ ವಿವರ ನೀಡುವ ಬಗ್ಗೆ

**ಡಾ|| ಎಂ.ಆರ್. ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೩೪ (೪೩೮) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬೆಳೆಯುವ ವಾಣಿಜ್ಯ ಪುಷ್ಪಗಳ ವಿವರ ನೀಡುವುದು;

(ಆ) ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಎಷ್ಟು ಎಕರೆಗಳಲ್ಲಿ ವಾಣಿಜ್ಯ ಪುಷ್ಪಗಳನ್ನು ಬೆಳೆಯುತ್ತಾರೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ರಾಜ್ಯ ಸರ್ಕಾರದಿಂದ ವಾಣಿಜ್ಯ ಬೆಳೆಗಳಿಗೆ ನೀಡುವ ಸಬ್ಸಿಡಿ ಹಣದ ವಿವರ ನೀಡುವುದು;

(ಈ) ೧೯೬೦ ರಿಂದ ೨೦೧೪ ರವರೆಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬೆಳೆದ ವಾಣಿಜ್ಯ ಪುಷ್ಪಗಳ ವಿವರ ಹಾಗೂ ಎಷ್ಟು ಎಕರೆಗಳಲ್ಲಿ ಎಂಬ ಮಾಹಿತಿ ನೀಡುವುದು ?

## ಹೇಮಾವತಿ ನದಿಗೆ ಸೇತುವೆ ನಿರ್ಮಾಣ

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೩೫ (೪೪೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೇಮಾವತಿ ನದಿಗೆ ಸೇತುವೆ ಇಲ್ಲದೆ ಜನರು ದೋಣಿಯಲ್ಲಿ ಸಂಚರಿಸುವ ಪರಿಸ್ಥಿತಿ ಈಗಲೂ ದಾರದಳ್ಳಿ ಗ್ರಾಮದಲ್ಲಿ ನಿರ್ಮಾಣವಾಗಿದೆ. ಇದಕ್ಕೆ ಸೇತುವೆ ನಿರ್ಮಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಂಡಿದೆ;

(ಆ) ಜನ್ನಾಪುರ–ಅಣಗೂರು ಇಕ್ಕಟ್ಟಾದ ರಾಜ್ಯ ಹೆದ್ದಾರಿ (ಸಂಖ್ಯೆ ೧೦೭೮) ಅಭಿವೃದ್ಧಿಗೆ ಇದೇ ರಸ್ತೆಯ ಕಿರುಗುಂದ ಗ್ರಾಮ ಪಂಚಾಯತ್ ಮತ್ತು ಚಿನ್ನಿಗಾ ಗ್ರಾಮ ಪಂಚಾಯತ್ ನಡುವೆ ಇರುವ ಬ್ರಿಟಿಷರ ಕಾಲದ ಬೆಟ್ಟದಮನೆ ಸೇತುವೆ ಕಿರಿಃದಾಗಿದ್ದು, ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದರೆ, ಏನು ಕ್ರಮ ಕೈಗೊಳ್ಳಲಾಗುವುದು?

## ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೩೬ (೪೪೧) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವಿರುದ್ಧ ಇಲಾಖೆಗೆ ಪ್ರಾಯೋಗಿಕವಾಗಿ ೨೦೦೯ರಲ್ಲಿ ನಿರ್ದೇಶಕರನ್ನು ನೇಮಕ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಆ ನಿರ್ದೇಶಕರನ್ನು ಇಲ್ಲಿಯವರೆಗೂ ಮುಂದುವರೆಸಲು ಕಾರಣವೇನು;

(ಆ) ಇಲಾಖೆಯ ಹಾಲಿ ನಿರ್ದೇಶಕರು ಲೋಕಾಯುಕ್ತ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದುದು ನಿಜವೇ; ಆದಾಗ್ಯೂ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅನುಸರಿಸದೆ ಆ ನಿರ್ದೇಶಕರನ್ನು ನೇಮಕ ಮಾಡಲು ಕಾರಣವೇನು;

(ಇ) ವರ್ಗಾವಣೆ ಕೋರಿ ನಿರ್ದೇಶಕರ ಕಛೇರಿಗೆ ಬರುವ ಮಹಿಳಾ ನೌಕರರಿಗೆ ನೋಟಿಸ್ ಜಾರಿ ಮಾಡಿರುವ ಪ್ರಕರಣಗಳೆಷ್ಟು; ಈ ರೀತಿ ನೋಟಿಸ್ ನೀಡಿ ಅವಮಾನವೀಯವಾಗಿ ತೆಯಿಂದ ವರ್ತಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿಗಳ ಅನುದಾನ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೩೭ (೪೪೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾಂ ಜಿಲ್ಲೆಯಲ್ಲಿ ಕಳೆದ ೨ ವರ್ಷಗಳಿಂದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿಗಳಿಗೆ ಬಿಡುಗಡೆಯಾದ ಅನುದಾನವೆಷ್ಟು;

(ಆ) ಸದರಿ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ;

(ಇ) ಹಾಗಿದ್ದಲ್ಲಿ, ಕಾಮಗಾರಿಗಳು ವಿಳಂಬವಾಗಿರಲು ಕಾರಣವೇನು; ಕಾಮಗಾರಿಗಳಿಗೆ ವೆಚ್ಚ ಮಾಡಿರುವ ಅನುದಾನವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

## ಗ್ರಾಮ ವಿದ್ಯುತ್ ಪ್ರತಿನಿಧಿಗಳು

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೩೮ (೩೬೮) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗ್ರಾಮ ವಿದ್ಯುತ್ ಪ್ರತಿನಿಧಿಗಳ ಸಂಖ್ಯೆ ಎಷ್ಟು; ಅವರ ಕರ್ತವ್ಯ ಮತ್ತು ವೇತನದ ವಿವರ ನೀಡುವುದು;

(ಆ) ಈ ಪ್ರತಿನಿಧಿಗಳು ನಿರ್ದಿಷ್ಟ ವೇತನದಡಿ ಮಾಸಿಕ ರೂ. ೨೦೦೦–೪೦೦೦ ವರೆಗೆ ಕಮೀಷನ್ ಪಡೆದು ಜೀವನ ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಪ್ರತಿನಿಧಿಗಳಿಗೆ ಕನಿಷ್ಠ ನಿರ್ವಹಣಾ ವೇತನ ಅಥವಾ ಸೇವಾ ಭದ್ರತೆ ನೀಡಿ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರ ನಿರ್ಧರಿಸಿದೆಯೇ?

## ತುಮಕೂರು ಜಿಲ್ಲೆಗೆ SCP ಯೋಜನೆಗೆ ಹಣ ಮಂಜೂರು ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೩೩೯ (೪೪೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) SCP ಯೋಜನೆ ಅಡಿಯಲ್ಲಿ ತುಮಕೂರು ಜಿಲ್ಲೆಗೆ ಬಿಡುಗಡೆ ಆದ ಹಣ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಯೋಜನೆಯಲ್ಲಿ ಯಾವ್ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಇರುವ ಮಾನದಂಡವೇನು;

(ಇ) ತುರುವೇಕೆರೆ ತಾಲ್ಲೂಕಿಗೆ ಬಿಡುಗಡೆಯಾದ ಹಣ ಎಷ್ಟು;

(ಈ) ಯಾವ ಯಾವ ಕಾಮಗಾರಿಗಳನ್ನು ಎಲ್ಲೆಲ್ಲಿ ಕೈಗೆತ್ತಿಕೊಳ್ಳಲಾಗಿದೆ ?

## ಅಲ್ಪಸಂಖ್ಯಾತರಿಗೆ ಸಿಗುವ ಯೋಜನೆಗಳ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೩೪೦ (೪೪೯) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಯಾವ ಯಾವ ಜನಾಂಗಕ್ಕೆ ಈ ಯೋಜನೆ ಲಭ್ಯವಾಗುತ್ತದೆ;

(ಆ) ಈ ಜನಾಂಗಗಳಿಗೆ ಸರ್ಕಾರ ಕೊಡುತ್ತಿರುವ ಯೋಜನೆಗಳಾವುವು; ವಿವರ ಕೊಡುವುದು;

(ಇ) ಈ ವರ್ಷ ಈ ಇಲಾಖೆಗೆ ಆಯವ್ಯಯದಲ್ಲಿ ನೀಡಿರುವ ಹಣ ಎಷ್ಟು;

(ಈ) ಯಾವ–ಯಾವ ಯೋಜನೆಗೆ ಎಷ್ಟು ಹಣ ನಿಗಧಿ ಮಾಡಲಾಗಿದೆ;

(ಉ) ವರ್ಷಾಂತ್ಯದಲ್ಲಿ ನಿಗಧಿ ಮಾಡಿರುವ ಹಣ ಪೂರ್ಣ ಖರ್ಚಾಗುವುದೆ?

## ಸಹಕಾರ ಸಂಘಗಳಲ್ಲಿ ನೋಂದಣಿ ಆಗಿರುವ ನೇಕಾರ ಸಂಘಗಳು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೩೪೧ (೪೫೦) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೩೦ ಜಿಲ್ಲೆಗಳಲ್ಲಿ ಸಹಕಾರ ಸಂಘದಲ್ಲಿ ನೋಂದಣಿಯಾಗಿರುವ ಕೈಮಗ್ಗ ನೇಕಾರ ಸಹಕಾರ ಸಂಘಗಳು

ಎಷ್ಟು; ಯಾವುವು; ವಿದ್ಯುತ್ ಚಾಲಿತ ನೇಕಾರ ಸಂಘಗಳು ಯಾವುವು; ಇರುವುದೆಷ್ಟು; ಪ್ರತ್ಯೇಕ ವಿವರ ನೀಡುವುದು;

(ಆ) ಸಹಕಾರ ಸಂಘಗಳಲ್ಲಿ ಈ ಬಡ ನೇಕಾರರಿಗೆ ಹಾಗೂ ಸಂಘಗಳಿಗೆ ವಿಶೇಷ ಯೋಜನೆ ಏನಾದರೂ ಇದೆಯೇ;

(ಇ) ಲೆಕ್ಕ ಪರಿಶೋಧನೆ ಶುಲ್ಕ ವಿನಾಯಿತಿ ನೀಡಲು ರಾಜ್ಯಾದ್ಯಂತ ನೇಕಾರ ಸಂಘಗಳಿಂದ ಮನವಿ ಬಂದಿರುವುದೆ;

(ಈ) ಹಾಗಿದ್ದಲ್ಲಿ, ಮನವಿ ಪುರಸ್ಕಾರ ಮಾಡಿ ಸರ್ಕಾರ ಅನುಕೂಲ ಮಾಡಲಾಗುವುದೇ?

## ನೇಕಾರರಿಗೆ ಇಂಧನ ಸಬ್ಸಿಡಿ ಕುರಿತು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೩೪೨ (೪೪೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಬಡ ನೇಕಾರರಿಗೆ ಇಂಧನ (ವಿದ್ಯುಚ್ಛಕ್ತಿ) ಸಬ್ಸಿಡಿ ಯೋಜನೆ ಯಾವಾಗಿನಿಂದ ಜಾರಿಗೆ ಬಂದಿದೆ ;

(ಆ) ನೇಕಾರರಿಗೆ ಯಾವ ದರದಲ್ಲಿ ವಿದ್ಯುಚ್ಛಕ್ತಿ ಚಾಲಿತ ಮಗ್ಗಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ ;

(ಇ) ರಾಜ್ಯದಲ್ಲಿ ಒಟ್ಟು ಎಷ್ಟು ಬಡ ನೇಕಾರರಿಗೆ ಈ ಸೌಲಭ್ಯ ದೊರಕುತ್ತಿದೆ; ಜಿಲ್ಲಾವಾರು ಮಾಹಿತಿ ಕೊಡುವುದು;

(ಈ) ಈ ಯೋಜನೆಯನ್ನು ರಾಜ್ಯದ ಬಡ ಕೈಮಗ್ಗ ನೇಕಾರರಿಗೂ ಕೂಡ ವಿಸ್ತರಿಸಲು ಅಥವಾ ಜಾರಿಗೆ ತರಲು ಬೇಡಿಕೆ ಬಂದಿರುವುದೆ ;

(ಉ) ಹಾಗಿದ್ದಲ್ಲಿ, ಯಾವಾಗಿನಿಂದ ಈ ಯೋಜನೆಯನ್ನು ಜಾರಿಗೆ ತರಲಾಗುವುದು ?

## ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಲಿಂಗದಹಳ್ಳಿ ಗ್ರಾಮದಲ್ಲಿ ೩೩ ಕೆ.ವಿ.ಎ ಸ್ಟೇಶನ್ ನಿರ್ಮಾಣ ಕಾಮಗಾರಿ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೪೩ (೪೫೨) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಲಿಂಗದಹಳ್ಳಿ ಗ್ರಾಮದಲ್ಲಿ ೩೩ ಕೆ.ವಿ.ಎ ಸ್ಟೇಶನ್ ನಿರ್ಮಾಣ ಕಾಮಗಾರಿ ಸಧ್ಯ ಯಾವ ಹಂತದಲ್ಲಿದೆ ;

(ಆ) ಸದರಿ ಕಾಮಗಾರಿಗೆ ಚಾಲನೆ ನೀಡಿದ್ದು ಯಾವಾಗ ;

(ಇ) ಸದರಿ ಯೋಜನೆಗಾಗಿ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ ; ಪರಿಹಾರ ಧನ ಪಾವತಿಸಲಾಗಿದೆಯೇ ;

(ಈ) ಈ ಎಲ್ಲಾ ಕಾರ್ಯಗಳು ಮುಕ್ತಾಯಗೊಂಡಿದ್ದರೂ ನೂತನ ಸ್ಟೇಶನ್ ನಿರ್ಮಾಣಕ್ಕೆ ಆಗುತ್ತಿರುವ ತೊಂದರೆಗಳನ್ನು ಇಲಾಖೆಯವರು ಸರ್ಕಾರದ ಗಮನಕ್ಕೆ ತಂದಿದ್ದಾರೆಯೇ ;

## ಶಿವಮೊಗ್ಗ ಜಿಲ್ಲೆಯಲ್ಲಿನ ಸೇತುವೆಗಳ ವಿಚಾರ

**ಶ್ರೀ ಭಾನುಪ್ರಕಾಶ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೪೪ (೪೬೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕಿನಲ್ಲಿನ ನದಿಗೆ ಅಡ್ಡಲಾಗಿ ನಿರ್ಮಾಣದ ಹಂತದಲ್ಲಿರುವ ಸೇತುವೆ ಕಾಮಗಾರಿಗಳು ಯಾವುವು;

(ಇವುಗಳ ಅಂದಾಜು ವೆಚ್ಚ ಮತ್ತು ಪ್ರಾರಂಭವಾದ ದಿನಾಂಕಗಳ ವಿವರ ನೀಡುವುದು) ;

(ಆ) ಸೇತುವೆ ಕಾಮಗಾರಿ ಕುಂಠಿತವಾಗಲು ಕಾರಣವೇನು ;

(ಇ) ಕಾಮಗಾರಿ ಪೂರೈಸಿ ಜನಸಾಮಾನ್ಯರಿಗೆ ಸೌಲಭ್ಯ ಸಿಗುವುದು ಯಾವಾಗ ?

## ಅಪೆಕ್ಸ್ ಬ್ಯಾಂಕ್ (APEX) ಮೂಲಕ ಸಾಲ ಪಡೆದಿರುವ ವಿಚಾರ

**ಶ್ರೀ ಭಾನುಪ್ರಕಾಶ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೪೫ (೪೫೪) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಮೂರು ವರ್ಷಗಳಲ್ಲಿ ಅಪೆಕ್ಸ್ ಬ್ಯಾಂಕ್ ಮೂಲಕ ೨೦ಕೋಟಿಗಿಂತ ಅಧಿಕ ಸಾಲ ಪಡೆದಿರುವ ಸಂಸ್ಥೆಗಳು ಮತ್ತು ಸಂಘಗಳು ಯಾವುವು (ಜಿಲ್ಲಾವಾರು ವಿವರ ನೀಡುವುದು) ;

(ಆ) ಅಪೆಕ್ಸ್ ಬ್ಯಾಂಕಿನಲ್ಲಿ ಯಾವ ಯಾವ ನಿಯಮಗಳನ್ನು ಅನುಸರಿಸಿ ಸಾಲ ನೀಡಲಾಗುತ್ತಿದೆ (ವಿವರ ನೀಡುವುದು);

(ಇ) ಅಪೆಕ್ಸ್ ಬ್ಯಾಂಕ್‌ನ ನಿರ್ದೇಶಕ ಮಂಡಳಿಯುಲ್ಲಿರುವವರ ಹೆಸರುಗಳನ್ನು ನೀಡುವುದು?

## ಕಬ್ಬಿನ ಬೆಳೆಗಾರರಿಗೆ ಹಣ ಪಾವತಿ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೩೪೬ (೪೫೬) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಬ್ಬಿನ ಬೆಲೆಯನ್ನು ಸರ್ಕಾರವು ನಿಗಧಿಪಡಿಸಿರುವ ಪ್ರಕಾರ ಯಾವ ಯಾವ ಸಕ್ಕರೆ ಕಾರ್ಖಾನೆಗಳಿಂದ ಎಷ್ಟು ಹಣ ರಾಜ್ಯದ ಕಬ್ಬಿನ

ಬೆಳೆಗಾರರಿಗೆ ಬರಬೇಕಿದೆ ಅಂದಾಜು ಎಷ್ಟು ಕಾಲದಿಂದ ಬರಬೇಕಿದೆ ;

(ಆ) ಸರ್ಕಾರಿ ಸಕ್ಕರೆ ಕಾರ್ಖಾನೆಗಳಿಂದಲೂ ಕಬ್ಬಿನ ಬೆಳೆಗಾರರಿಗೆ ಹಣ ಪಾವತಿಸಬೇಕಾದಿದೆಯೇ; ಇದ್ದಲ್ಲಿ ವಿವರ ನೀಡುವುದು ?

## ಹಾವೇರಿ ಜಿಲ್ಲೆಯ ಸಹಕಾರ ಸಂಘಗಳಿಂದ ಸಾಲಮನ್ನ

**ಶ್ರೀ ಸೋಮಣ್ಣ. ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೪೭ (೪೫೮) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಾವೇರಿ ಜಿಲ್ಲೆಯಲ್ಲಿರುವ ವ್ಯವಸಾಯ ಸಹಕಾರ ಸಂಘಗಳು (ವಿ.ಎಸ್.ಎಸ್.) ಎಷ್ಟು ; ಆಯಾ ಸಹಕಾರ ಸಂಘಗಳಿಗೆ ಸಾಲಕ್ಕಾಗಿ ಬಂದ ಅರ್ಜಿಗಳು ಎಷ್ಟು (ತಾಲ್ಲೂಕುವಾರು ಮಾಹಿತಿ ಒದಗಿಸುವುದು) ;

(ಆ) ಹಾವೇರಿ ಜಿಲ್ಲೆಯಲ್ಲಿ ಪ್ರತಿ ಸಹಕಾರಿ ಸಂಘಗಳಿಂದ (ರೂ. ೨೫,೦೦೦ ದಿಂದ ೩ ಲಕ್ಷ ರೂಪಾಯಿಯವರೆಗೆ) ಯಾವ ಯಾವ ರೈತರಿಗೆ ಎಷ್ಟೆಷ್ಟು ಸಾಲ ಕೊಟ್ಟಿರುತ್ತಾರೆ. (ತಾಲ್ಲೂಕುವಾರು ಸಹಕಾರ ಸಂಘಗಳವಾರು ಮಾಹಿತಿ ಒದಗಿಸುವುದು) ;

(ಇ) ಸಾಲಕ್ಕಾಗಿ ಬಂದ ಅರ್ಜಿಗಳಲ್ಲಿ ಸಾಲ ಸಿಗದೆ ಇರುವ ರೈತರ ಸಂಖ್ಯೆ ಎಷ್ಟು ;

(ಈ) ಈ ಹಿಂದೆ ಸಾಲ ಪಡೆದ ರೈತರಿಗೆ ಮಳೆ ಬಾರದೆ ಕಳಪೆ ಬೀಜದಿಂದ ಹಾನಿಯಾದ ರೈತರಿಗೆ ಸಾಲಮನ್ನಾ ಮಾಡಲು ಸರ್ಕಾರ ನಿರ್ಧರಿಸಿದೆಯೇ ;

(ಉ) ನಿರ್ಧರಿಸಿದ್ದರೆ, ಎಷ್ಟು ರೈತರಿಗೆ ಎಷ್ಟೆಷ್ಟು ಸಾಲ ಮನ್ನಾ ಮಾಡಲಾಗುತ್ತಿದೆ ; ಹಾಗೂ ಯಾವಾಗ ಮಾಡಲಾಗುತ್ತದೆ ?

## ಹಾವೇರಿ ನಗರದಲ್ಲಿ ನಗರಸಭೆ ಹಾಗೂ ಜಿಲ್ಲಾ ಪಂಚಾಯತ್‌ವತಿಯಿಂದ ತೆರೆದ ಕೊಳವೆ ಬಾವಿಗಳು

**ಶ್ರೀ ಸೋಮಣ್ಣ. ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೪೮ (೪೫೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಾವೇರಿ ನಗರದಲ್ಲಿ ಜಿಲ್ಲಾ ಪಂಚಾಯತ್ ಹಾಗೂ ನಗರ ಸಭೆಯಿಂದ ಕೊರೆದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ;

(ಆ) ಇವುಗಳಲ್ಲಿ ಎಷ್ಟು ಕೊಳವೆಬಾವಿಗಳು ಕಾರ್ಯ ನಿರ್ವಹಿಸುತ್ತಿವೆ, ಹಾಗೂ ಕಾರ್ಯ ನಿರ್ವಹಿಸದೇ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ;

(ಇ) ಕಾರ್ಯ ನಿರ್ವಹಿಸದೇ ಇರುವ ಕೊಳವೆ ಬಾವಿಗಳು ಹಾಗೆಯೇ ತೆರೆದೇ ಇರುವುದರಿಂದ ಅನೇಕ ಚಿಕ್ಕ ಮಕ್ಕಳಿಗೆ ಪ್ರಾಣಾಪಾಯವಾಗುತ್ತಿರುವುದು ಹಾಗೂ ಸಾರ್ವಜನಿಕರಿಗೆ ಭಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದರೆ, ಇಂತಹ ಕೊಳವೆ ಬಾವಿಗಳ ಮಾಲೀಕರ ಮೇಲೆ ಯಾವ ರೀತಿ ಕಾನೂನು ಕ್ರಮ ಕೈಗೊಳ್ಳಲಾಗಿದೆ ಹಾಗೂ ಖಾಸಗೀ ಕೊಳವೆ ಬಾವಿಗಳು ಕಾರ್ಯ ನಿರ್ವಹಿಸದೇ ಇರುವುದರಿಂದ ಅವುಗಳ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿವೆ ?

## ಕಬ್ಬು ಬೆಳೆದು ಹಾನಿಯಾದ ರೈತರು

**ಶ್ರೀ ಸೋಮಣ್ಣ. ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೪೯ (೩೮೧) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಾವೇರಿ ಜಿಲ್ಲೆಯಲ್ಲಿ ಕಬ್ಬು ಬೆಳೆದು ಸಕ್ಕರೆ ಕಾರ್ಖಾನೆಗೆ ಕಳುಹಿಸದೇ ಹಾನಿಗೊಳಗಾದ ರೈತರ ಸಂಖ್ಯೆ ಎಷ್ಟು ; (೨೦೧೪ ಜನವರಿಯಿಂದ ಇಲ್ಲಿಯವರೆಗೆ ತಾಲ್ಲೂಕುವಾರು ಮಾಹಿತಿ ಒದಗಿಸುವುದು) ;

(ಆ) ೨೦೦೬-೦೭ರಲ್ಲಿ ಶಿಗ್ಗಾಂವ ತಾಲ್ಲೂಕಿನಲ್ಲಿ ಕಬ್ಬು ಬೆಳೆದು ಸಕ್ಕರೆ ಕಾರ್ಖಾನೆಗೆ ಸದಸ್ಯರಿದ್ದು, ಕಾರ್ಖಾನೆಯಲ್ಲಿ ಸರದಿ ನಿಂತರೂ ಕಾರ್ಖಾನೆ ತಲುಪದೇ ಇದ್ದು ಹಾನಿಗೊಳಗಾದ ರೈತರ ಸಂಖ್ಯೆ ಎಷ್ಟು ; ಮತ್ತು ಯಾರು, ಯಾರು ;

(ಇ) ಹಾನಿಯಾದ ರೈತರಿಗೆ ಪ್ರತಿ ಎಕರೆಗೆ ೨೫,೦೦೦ ಸಾವಿರ ರೂಪಾಯಿ ಪರಿಹಾರ ಕೊಡಲು ಆಗಿನ ಸರ್ಕಾರ ನಿರ್ಧರಿಸಿತ್ತು ; ಅದರಂತೆ ಪರಿಹಾರ ಒದಗಿಸಲಾಗಿದೆಯೇ ;

(ಈ) ಪರಿಹಾರ ಒದಗಿಸಿದ್ದರೆ, ಎಷ್ಟು ರೈತರಿಗೆ ಎಷ್ಟೆಷ್ಟು ಪರಿಹಾರ ಒದಗಿಸಲಾಗಿದೆ (ತಾಲ್ಲೂಕುವಾರು ಮಾಹಿತಿ ಒದಗಿಸುವುದು) ?

## ಮಳವಳ್ಳಿ – ಮೈಸೂರು ರಾಜ್ಯ ಹೆದ್ದಾರಿಯ ಅಭಿವೃದ್ಧಿ

**ಶ್ರೀ ಮರಿತಿಬ್ಬೆಗೌಡ (ಶಿಕ್ಷಕರ ಕ್ಷೇತ್ರ) :–**

೩೫೦ (೪೫೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಳವಳ್ಳಿಯಿಂದ ಬನ್ನೂರು ಮಾರ್ಗ ಮೈಸೂರು ಸೇರುವ ರಾಜ್ಯ ಹೆದ್ದಾರಿಯಲ್ಲಿ ಸಾರ್ವಜನಿಕರ ಹಾಗೂ ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗಿರುವುದರಿಂದ ಅಪಘಾತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ರಸ್ತೆಯನ್ನು ವಿಶ್ವಬ್ಯಾಂಕಿನ ನೆರವಿನಿಂದ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ನಿಗಮದವತಿಯಿಂದ ೪ ಪಥದ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರ ಯೋಜನೆಯನ್ನು ಸಿದ್ಧಪಡಿಸಿದೆಯೇ ;

(ಇ) ಹಾಗಾದರೆ ಯೋಜನೆಯ ಒಟ್ಟು ಮೊತ್ತವೆಷ್ಟು ; ಯಾವ ಕಾಲಮಿತಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಲಾಗುವುದು ?

## ಪ್ರಮುಖವಾದ ರಸ್ತೆಗಳು, ಸಂಪರ್ಕ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಕುರಿತು

**ಶ್ರೀ ವಿ.ಸೋಮಣ್ಣ. (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೫೧ (೪೬೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರಮುಖವಾದ ರಸ್ತೆಗಳ ಹಾಗೂ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ರಸ್ತೆ ವಿಸ್ತರಣೆಗೆ ವಶಪಡಿಸಿಕೊಂಡ ಭೂಮಿ ಎಷ್ಟು ;

(ಆ) ಸದರಿ ಭೂಮಿಯ ಹಕ್ಕು ಸ್ವಾಮ್ಯತೆಯು ಯಾರಿಗಿತ್ತು ; ಹೆಚ್ಚುವರಿ ಜಾಗ ವಶಕ್ಕೆ ಈ ಸಂಸ್ಥೆಯವರು ವಿರೋಧ ವ್ಯಕ್ತ ಪಡಿಸಿರುವುದು ಕಂಡು ಬಂದಿದೆಯೇ ;

(ಇ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯ ಜಕ್ಕೂರು ಬಳಿ ಇರುವ ವೈಮಾನಿಕ ತರಬೇತಿ ಸಂಸ್ಥೆಗೆ ವಶಪಡಿಸಿಕೊಂಡ ಜಾಗದಿಂದ ವೈಮಾನಿಕ ಹಾರಾಟ ತರಬೇತುದಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದೆಯೇ ;

(ಈ) ಇದರಿಂದ ತರಬೇತು ವಿಮಾನಗಳಿಗೆ ಆಪಾಯವಾಗುವ ಆತಂಕ ಸರ್ಕಾರಕ್ಕಿದೆಯೇ ; ಹಾಗಿದ್ದಲ್ಲಿ ರಸ್ತೆ ವಿಸ್ತರಿಸುವ ಕ್ರಮದಿಂದ ಸರ್ಕಾರ ಹಿಂದೆ ಸರಿಯುವುದೇ ಅಥವಾ ಆ ಸಂಸ್ಥೆಗಳ ತರಬೇತಿ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಯಾವ ಮುಂಜಾಗ್ರತಾ ಕ್ರಮಗಳನ್ನು ಸರ್ಕಾರ ಕೈಗೊಳ್ಳುವುದು ;

(ಉ) ಈ ನಿಟ್ಟಿನಲ್ಲಿ ಇರುವ ಸಂಸ್ಥೆಗಳೊಂದಿಗೆ ಸರ್ಕಾರ ಮಾತುಕತೆ ನಡೆಸಿದೆಯೇ ; ಇಲ್ಲದಿದ್ದಲ್ಲಿ ಕಾರಣಗಳೇನು ; ಈ ರೀತಿಯ ತೀರ್ಮಾನ ಕೈಗೊಳ್ಳುವಾಗ ಸರ್ಕಾರ ವಿವೇಚನಾಯುತವಾಗಿ ನಡೆದುಕೊಳ್ಳಬೇಕಾದ ಬಗ್ಗೆ ಇಲಾಖೆಯ ನಿಲುವೇನು ; (ವಿವರ ಒದಗಿಸುವುದು) ?

## ವಿದ್ಯುತ್ ಬಳಕೆ ಹಾಗೂ ಅಕ್ರಮ ಸಂಪರ್ಕ

**ಶ್ರೀ ವಿ. ಸೋಮಣ್ಣ. (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೫೨ (೪೬೦) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಪಂಪ್‌ಸೆಟ್ ಬಳಕೆಗೆ ಎಷ್ಟು ಯೂನಿಟ್ ವಿದ್ಯುತ್ ಬಳಕೆಯಾಗುತ್ತಿದೆ ; ಈ ವ್ಯವಸ್ಥೆಗೆ ಯಾವ ಮಾನದಂಡದಲ್ಲಿ ಶುಲ್ಕ ವಿಧಿಸಲಾಗುತ್ತಿದೆ ; ಇದರಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು ; (ಜಿಲ್ಲಾವಾರು ವಿವರ ನೀಡುವುದು) ;

(ಆ) ಕೆಲವೊಂದು ಕಡೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನೊಳಗೊಂಡು, ಗ್ರಾಮಸ್ಥರು ಸೇರಿ ವಿದ್ಯುತ್ ಕಂಪನಿಯ ಅನುಮತಿ ಪಡೆಯದೇ ವಿದ್ಯುತ್ ಬಳಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ ಇಂತಹ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ;

(ಇ) ವಿದ್ಯುತ್ ಸೋರಿಕೆ ಹಾಗೂ ವಿದ್ಯುತ್ ಅಕ್ರಮ ಸಂಪರ್ಕದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ ; ಅಕ್ರಮ ವಿದ್ಯುತ್ ಸಂಪರ್ಕಕ್ಕೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ; ಇಂತಹ ಎಷ್ಟು ಪ್ರಕರಣಗಳು ಪತ್ತೆಯಾಗಿವೆ ; ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ; (ಬೆಳಕಿಗೆ ಬಂದ ಪ್ರಕರಣಗಳ ಜಿಲ್ಲಾವಾರು ವಿವರ ನೀಡುವುದು) ;

(ಈ) ವಿದ್ಯುತ್ ಸದ್ಬಳಕೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗಿದೆಯೇ ? (ವಿವರ ನೀಡುವುದು)

# ಬಳ್ಳಾರಿ ನಗರದಲ್ಲಿ ರೇಲ್ವೆ ಲೆವೆಲ್ ಕ್ರಾಸಿಂಗ್‌ಗಳಿಗೆ ಪರ್ಯಾಯ ವ್ಯವಸ್ಥೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)** –

೩೫೩ (೪೬೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ನಗರದ ಮೃಗಾಲಯ ಹತ್ತಿರ ಇರುವ ರೇಲ್ವೆ ಲೆವೆಲ್ ಕ್ರಾಸಿಂಗ್ (LC111) ಬಳಿ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ;

(ಆ) ಈ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಕಾಮಗಾರಿಯನ್ನು ಬಳ್ಳಾರಿ ಮಹಾನಗರ ಪಾಲಿಕೆಗೆ ವಹಿಸಲಾಗಿದೆಯೇ ;

(ಇ) ಕಾಮಗಾರಿಗೆ ನಿಗದಿಪಡಿಸಿರುವ ಮೊತ್ತವೆಷ್ಟು ; ಈವರೆಗೆ ಬಿಡುಗಡೆಗೊಳಿಸಲಾಗಿರುವ ಮೊತ್ತವೆಷ್ಟು ;

(ಈ) ಪರ್ಯಾಯ ವ್ಯವಸ್ಥೆ ಕಲ್ಪಿಸುವ ಕಾಮಗಾರಿ ವಿಳಂಬಕ್ಕೆ ಆಗಿರುವ ಕಾರಣಗಳೇನು ; ಕಾರಣಗಳನ್ನು ಸರ್ಕಾರ ಪರಿಹರಿಸಿ ಯಾವ ಕಾಲಮಿತಿಯಲ್ಲಿ ಸಾರ್ವಜನಿಕರಿಗೆ ಈ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗುವುದು ?

## ಬಳ್ಳಾರಿ ಜಿಲ್ಲೆಯ ಕಬ್ಬಿನ ಬೆಳೆಗಾರರಿಗೆ ಪಾವತಿಸಬೇಕಾದ ಬಾಕಿ ಹಣ

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) –**

೩೫೪ (೪೬೩) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯ ಕಬ್ಬು ಬೆಳೆಗಾರರಿಗೆ ಪಾವತಿಸಬೇಕಾಗಿರುವ ಕಬ್ಬಿನ ಬಾಕಿ ಹಣ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಈ ಕಬ್ಬಿನ ಬೆಳೆಗಾರರಿಗೆ ಬಾಕಿ ಹಣ ಪಾವತಿಸಲು ವಿಳಂಬ ಆಗಿರುವುದಕ್ಕೆ ಕಾರಣಗಳೇನು ;

(ಇ) ಬಾಕಿ ಹಣ ಪಾವತಿಸಲು ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ;

(ಈ) ಜಿಲ್ಲೆಯ ಯಾವ ಯಾವ ಕಾರ್ಖಾನೆಗಳು ಎಷ್ಟು ಕಬ್ಬಿನ ಬಾಕಿ ಹಣ ಪಾವತಿಸಬೇಕಾಗಿದೆ ? (ಕಾರ್ಖಾನೆಗಳವಾರು ವಿವರ ನೀಡುವುದು)

## ಬಳ್ಳಾರಿ ಜಿಲ್ಲೆಯಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಆದ ಬೆಳೆಗೆ ಪರಿಹಾರ

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) –**

೩೫೫ (೪೬೪) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಹಾನಿಗೊಳಗಾದ ರೈತರಿಗೆ ಪ್ರಸಕ್ತ ವರ್ಷ ಎಷ್ಟು ಪರಿಹಾರ

ನೀಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು ಹಾಗೆಯೇ ಆಗಿರುವ ಬೆಳೆ ನಷ್ಟದ ವಿವರ ನೀಡುವುದು ) ;

(ಆ) ದಿನಾಂಕ: ೦೬-೦೬-೧೪ ರಂದು ಹೊಸಪೇಟೆ ತಾಲ್ಲೂಕಿನ ಕಂಪ್ಲಿ ಗ್ರಾಮದ ಸುತ್ತಮುತ್ತಲ ಭಾರಿ ಗಾಳಿ ಮಳೆಯಿಂದ ಆದ ಬೆಳೆ ನಷ್ಟ (ಬಾಳೆ ಕಬ್ಬು ಇತ್ಯಾದಿ) ಎಷ್ಟು ;

(ಇ) ಪ್ರತಿ ಎಕರೆಗೆ ಬೆಳೆ ಪರಿಹಾರ ಎಂದು ಎಷ್ಟು ಹಣ ನಿಗದಿಪಡಿಸಲಾಗಿದೆ; ಈ ಪರಿಹಾರ ಹಣವನ್ನು ಯಾವಾಗ ವಿತರಿಸಲಾಗುತ್ತದೆ; ಇದಕ್ಕಾಗಿ ಎಷ್ಟು ಹಣ ಬಿಡುಗಡೆಗೊಳಿಸಲಾಗಿದೆ?

## ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಪಾವತಿಸಬೇಕಾದ ಹಣ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) –**

೩೫೬ (೪೬೯) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳಿಗೆ ರೈತರು ಕಬ್ಬು ಸರಬರಾಜು ಮಾಡಿದ್ದು ಇದುವರೆವಿಗೂ ಹಣ ಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳ ರೈತರಿಗೆ ಹಣ ಪಾವತಿಸಬೇಕು ; (ತಾಲ್ಲೂಕುವಾರು ಪೂರ್ಣ ವಿವರ ನೀಡುವುದು) ;

(ಇ) ಹಣ ಪಾವತಿಸದೇ ಇರುವ ಸಕ್ಕರೆ ಕಾರ್ಖಾನೆಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಮಳವಳ್ಳಿ ಪುರಸಭೆ ಮುಖ್ಯಾಧಿಕಾರಿಗಳ ಅವ್ಯವಹಾರದ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) –**

೩೫೭ (೪೬೭೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಳವಳ್ಳಿ ಪುರ ಸಭೆ ಮುಖ್ಯಾಧಿಕಾರಿಗಳು ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಸರಿಯಾಗಿ ನಿರ್ವಹಿಸದೇ ಅವರ ಮೇಲೆ ಸಾರ್ವಜನಿಕರು ಹಾಗೂ ಪುರಸಭೆ ಸದಸ್ಯರು ಭ್ರಷ್ಟಾಚಾರ ಮತ್ತು ಅವ್ಯವಹಾರದ ಬಗ್ಗೆ ಈಗಾಗಲೇ ದೂರು ನೀಡಿದ್ದರು ಸಹ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಜೆ.ಡಿ. ಆಡಳಿತ ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರು ಈಗಾಗಲೇ ಇವರ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲದರ ಬಗ್ಗೆ ಪೂರ್ಣ ವರದಿ ನೀಡುವುದು ;

(ಇ) ಸದರಿ ಅಧಿಕಾರಿಗಳ ಮೇಲೆ ಆರೋಪಗಳು ಸಾಬೀತಾದರು ಸಹ ಇವರನ್ನು ಅಮಾನತ್ತಿನಲ್ಲಿಡದಿರಲು ಕಾರಣವೇನು ಪೂರ್ಣ ಮಾಹಿತಿ ನೀಡುವುದು ?

## ಕಬ್ಬನ್ ಉದ್ಯಾನವನದ ಜಮೀನು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :-**

೩೫೮ (೪೭೪) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಕಬ್ಬನ್ 'ಉದ್ಯಾನವನ' ವನ್ನು ಯಾರು, ಯಾವಾಗ ಮತ್ತು ಏತಕ್ಕಾಗಿ ನಿರ್ಮಾಣ ಮಾಡಿದರು ;

(ಆ) ಪ್ರಾರಂಭದ ಅವದಿಯಲ್ಲಿ ಈ ಉದ್ಯಾನವನದ ಒಟ್ಟಾರೆ ಪ್ರದೇಶದ ವಿಸ್ತೀರ್ಣ ಎಷ್ಟಿತ್ತು; ಈಗ ಎಷ್ಟಿದೆ; (ವಿಸ್ತೀರ್ಣ ಕಡಿಮೆಗೊಳಿಸಲು ಬೇರೆ ಉದ್ದೇಶಕ್ಕೆ ನೀಡಲು ಹೊರಡಿಸಿದ ಆದೇಶ, ಅಧಿಸೂಚನೆ ಇತ್ಯಾದಿಗಳ ಪ್ರತಿಗಳನ್ನೂದಗಿಸುವುದು) ;

(ಇ) ಈ ಉದ್ಯಾನವನದ ಜಮೀನು ಖಾಸಗಿಯವರಿಂದ ಏನಾದರೂ ಒತ್ತುವರಿಯಾಗಿರುವ ದೂರುಗಳು ಇವೆಯೇ ; ಇದ್ದಲ್ಲಿ ವಿವರ ಒಸಗಿಸುವುದು ;

(ಈ) ಸರ್ಕಾರದ ಯಾವುದಾದರೂ ಉದ್ದೇಶಗಳಿಗೆ ಈ ಜಮೀನನ್ನು ಹಂಚಿಕೆ ಮಾಡುವ ಅಥವಾ ಒತ್ತುವರಿಗಳನ್ನು ತಡೆಯುವ ಕಾರ್ಯವನ್ನು ಸರ್ಕಾರ ಮುಂದಿನ ದಿನಗಳಲ್ಲಿ ಮಾಡುವುದೇ ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ-2, ಬೆಂಗಳೂರು-59/ಕಾ.ಸೂ.0 3357/1000 ಪ್ರತಿಗಳು/26-6-14